ವತ್ರ-ವಿಜಯ

~~560 478~~ 471 Rare D

RB

ACC NO 090132

ಶ್ರೀ. ವತ್ಸ-ವಿಜಯ

ಪರಾಮರ್ಶನ ಗ್ರಂಥ


ಅಕ್ಷರ ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ. 1957

Scan ಆಗಿದೆ.

471-480



......ಆಯುಧಹೀನ ದೃಢವರ್ಮನನ್ನು ಚಿತ್ರಧ್ವಜನು ಕೆರಳಿಸಿದನು. (ಪುಟ ೨೦).

ಅಪ್ಪೆಂಬಳ್ಳ ವಾಸುದೇವ ನಾವಡ
II Form
ಕನ್ನಡ ಪ್ರಬಂಧ ಸ್ಪರ್ಧೆ

ವತ್ಸ ವಿಜಯ

[ಮುದ್ದಣ ಮಹಾಕವಿಯ ಮೊದಲ ಕೃತಿಯ ಮುದ್ದು ಕತೆ.]

ಅ. ಗೌ. ಕಿ.

೧೯೫೭

ಬಾಲಸಾಹಿತ್ಯ ಮಂಡಲ, ಮಂಗಳೂರು - ೩.
ದ. ಕನ್ನಡ.

ಐವತ್ತು ನಯೇ ಪೈಸೆ.

ಹಕ್ಕುಗಳೆಲ್ಲ ಲೇಖಕರವು.

090132

★

ಪ್ರಕಾಶಕರು:-
ಬಾಲಸಾಹಿತ್ಯ ಮಂಡಲ, ಮಂಗಳೂರು-೩,
ದ. ಕನ್ನಡ.

★

ಮುದ್ರಕರು:-
ಆನಂದ ಪ್ರಿಂಟಿಂಗ್ ವರ್ಕ್ಸ್, ಕಿನ್ನಿಗೋಳಿ,
ದ. ಕನ್ನಡ.

— ಕುರಿತು

ಕನ್ನಡ ಸಾಹಿತ್ಯದ ನವೋದಯಕಾಲಕ್ಕೆ ನಾಂದಿಯಾಗಿ ಉದಿಸಿದವರು ನಂದಳಿಕೆ ಲಕ್ಷ್ಮೀನಾರ್ಣಪ್ಪಯ್ಯನವರು. ಅವರ ಮೊದಲ ಕೃತಿ 'ರತ್ನಾವತಿ ಕಲ್ಯಾಣ'ವೆಂಬ ಯಕ್ಷಗಾನ ಪ್ರಸಂಗ. ಆ ಪ್ರಸಂಗದ ಮುದ್ದಾದ ಕತೆಯನ್ನು ಈ ಪುಟ್ಟ ಹೊತ್ತಗೆಯಲ್ಲಿ ಸಂಗ್ರಹಿಸಿಕೊಡಲಾಗಿದೆ. ಈ ಕತೆಯು ಶುಚಿ-ರುಚಿಯಾಗಿದ್ದು ನೀತಿಬೋಧಕವಾದ ಸನ್ನಿವೇಶಗಳಿಂದ ಕೂಡಿರುವುದರಿಂದ ಅದನ್ನು ಮಾಧ್ಯಮಿಕ ತರಗತಿಗಳ ಮಕ್ಕಳ ಮಟ್ಟಕ್ಕೆ ಮೀರದಂತೆ, ಕುತೂಹಲವೇ ಪ್ರಧಾನವಾಗಿರುವ ಅವರ ವಾಚನಾಭಿರುಚಿಗೆ ಸೇರುವಂತೆ ಅಳವಡಿಸಿದ ಕೆಲಸಮಾತ್ರ ಲೇಖಕನದು; ಮಿಕ್ಕವೆಲ್ಲ ಆ 'ಮುದ್ದಣ'ನದು.

ಮುದ್ದಣನೆಂಬುದು ನಂದಳಿಕೆ ಲಕ್ಷ್ಮೀನಾರ್ಣಪ್ಪಯ್ಯನವರ ಕಾವ್ಯನಾಮ. ನಂದಳಿಕೆಯು ಮೊದಲು ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲೂಕಿನ ಒಂದು ಸಣ್ಣ ಗ್ರಾಮವಾಗಿತ್ತು. ಈಗ ಅದು ಕಾರ್ಕಳ ತಾಲೂಕಿಗೆ ಸೇರಿದೆ. ಅಲ್ಲಿ, ೧೮೭೦ರ ಜನವರಿ ೨೪ರಂದು ಈ ಕವಿಯ ಜನನವಾಯಿತು. ತಂದೆಯ ಹೆಸರು ತಮ್ಮಯ್ಯ. ತಾಯಿ ಮಹಾಲಕ್ಷ್ಮಿ. ಅವರು ದೇವಸ್ಥಾನಗಳಲ್ಲಿ ಮಾಲೆಕಟ್ಟಿಕೊಡುವ 'ಸ್ಥಾನಿಕ' ಎಂಬ ಜಾತಿಯವರು.

ನಾರ್ಣಪ್ಪಯ್ಯನವರು ರತ್ನಾವತಿ ಕಲ್ಯಾಣ ಮತ್ತು ಕುಮಾರ ವಿಜಯ ಎಂಬ ಯಕ್ಷಗಾನ ಪ್ರಸಂಗಗಳೆರಡನ್ನು ಬರೆದು ಯಕ್ಷಗಾನ ಪ್ರಪಂಚದಲ್ಲಿಯೂ ತನ್ನದೇ ಆದ ಹೊಸಹಾದಿಯನ್ನು ತೋರಿದವರು. ಶ್ರೀ ರಾಮಪಟ್ಟಾಭಿಷೇಕವೆಂಬ ಖಂಡಕಾವ್ಯವನ್ನೂ ಅದ್ಭುತ ರಾಮಾಯಣ ಮತ್ತು ರಾಮಾಶ್ವಮೇಧಗಳೆಂಬೆರಡು ಗದ್ಯಕಾವ್ಯಗಳನ್ನೂ ಬರೆದಿರುವರು. ಅಷ್ಟರೊಳಗೆನೇ ಇವರಿಗೆ ಕ್ಷಯರೋಗವು ತಟ್ಟಿ ತನ್ನ ೩೧ನೇ ವಯಸ್ಸಿನಲ್ಲಿ ಅಂದರೆ ೧೫–೨–೧೯೦೧ರಂದು ಅಕಾಲದಲ್ಲಿ ಅಸ್ತಮಿಸಿದರು.

ಕತೆಯ ಕಂತುಗಳು

೧

ಚೂತ ಫಲ

ಈ ಜಗತ್ತಿನಲ್ಲಿ ಒಟ್ಟಿಗೆ ಐವತ್ತಾರು ದೇಶಗಳಿದ್ದವು. ಅವುಗಳಲ್ಲಿ ಗಂಗಾನದಿಯ ತಟಪ್ರದೇಶದಲ್ಲಿದ್ದ ವಿಸ್ತಾರವಾದ ಅಂಗದೇಶವು ಬಹು ಪ್ರಸಿದ್ಧವಾದುದು; ವೈಭವದಿಂದ ಕೂಡಿದುದು. ಭೋಗ ಭಾಗ್ಯಗಗಳಿಂದ ಕೂಡಿದ ಆ ರಾಜ್ಯವು ಸ್ವರ್ಗಲೋಕವನ್ನು ಕೂಡಾ ಮಿಗಿಸುತಿತ್ತು.

ಅಂಥಾ ಬೆಡಗಿನಿಂದ ಶೋಭಿಸುತಿದ್ದ ಅಂಗದೇಶಕ್ಕೆ ದೃಢವರ್ಮಸಿಂಬವನು ರಾಜನಾಗಿದ್ದನು. ದೃಢವರ್ಮನು ಮಹಾ ಪರಾಕ್ರಮಿಯಾಗಿದ್ದು ಸತ್ಯ ಧರ್ಮಗಳಿಗೆ ಕೊರತೆಯಾಗದಂತೆ, ಯೋಗ್ಯವಾಗಿ ಪ್ರಜೆಗಳನ್ನು ಪಾಲಿಸುತ್ತಾ ಬರುತ್ತಿದ್ದನು. ಜಾಣರಾದ ಮಂತ್ರಿಗಳು ರಾಜನ ಹಿತಚಿಂತಕರಾಗಿದ್ದು ಕಾಲಕಾಲಕ್ಕೆ ಬೇಕಾದ ಸೂಚನೆಗಳಿಂದ ರಾಜನ ಆಳ್ವಿಕೆಯು ಚೆನ್ನಾಗಿರುವಂತೆ ನೋಡಿಕೊಳ್ಳುತಿದ್ದರು.

ಹೀಗೆ ಅನೇಕ ವರ್ಷಗಳು ಸಂದುವು. ದೇವರ ದಯೆಯಿಂದ ರಾಜನಿಗೆ ಯಾವುದೇ ವಿಭಾಗದಲ್ಲಿ ಯಾವುದೇ ರೀತಿಯ ಕೊರತೆಯೂ ಕಂಡುಬರಲಿಲ್ಲ. ಪ್ರಜೆಗಳೆಲ್ಲ ವಿಧೇಯರಾಗಿದ್ದರು. ಅಧಿಕಾರಿಗಳು ತಮ್ಮ ತಮ್ಮ ಕರ್ತವ್ಯಗಳನ್ನು ತಪ್ಪಿಲ್ಲದೆ ನೆರವೇರಿಸುತಿದ್ದರು. ಮಂತ್ರಿಗಳು ರಾಜನಿಗೆ ಅನುವರ್ತಿಗಳಾಗಿ ಸಹಕರಿಸುತಿದ್ದರು.

ಆದರೂ ರಾಜನ ಮನಸ್ಸಿನಲ್ಲೊಂದು ಚಿಂತೆ ಕೊರೆಯುತ್ತಲೇ ಇತ್ತು. ಎಷ್ಟು ಭಾಗ್ಯವಿದ್ದರೇನು? ರಾಜನಿಗೆ ಪುತ್ರರು ಉದಿಸಿರಲಿಲ್ಲ. ಈ ಒಂದು ದುಃಖವು ಅವನ ಮಂತ್ರಿಗೂ ತಿಳಿದಿತ್ತು. ಆದರೆ ಅವನಾದರೂ

ಏನು ಮಾಡಬಲ್ಲ? ಹೀಗಾಗಿ ರಾಜನು ಸದಾಕಾಲವೂ ಒಳಗೊಳಗೆ ಮರುಗುತ್ತಲೇ ಇದ್ದನು.

ಒಂದು ದಿನ ರಾಜನ ದುಃಖವನ್ನು ಪರಿಹರಿಸುವುದಕ್ಕಾಗಿಯೋ ಎಂಬಂತೆ ನಾರದನೆಂಬ ಮುನಿ ಶ್ರೇಷ್ಠನು ಅವನ ಆಸ್ಥಾನಕ್ಕೆ ಬಂದನು.

ದೇವರ ನಾಮವನ್ನು ಕೀರ್ತನೆಯ ರೂಪದಿಂದ ಹಾಡಿ ಸ್ಮರಿಸುತ್ತಾ ಬರುತ್ತಿರುವ ಆ ದೇವಋಷಿಯ ಆಗಮನವು, ಬಾಗಿಲು ಕಾಯುತಿದ್ದ ದೂತರಿಗೆ ದೂರದಿಂದಲೇ ಗೊತ್ತಾಯಿತು. ಒಡನೆ ದೂತನೊಬ್ಬನು ಬಂದು ದೃಢವರ್ಮ ರಾಜನಿಗೆ ವಾರ್ತೆಯನ್ನು ಮುಟ್ಟಿಸಿದನು.

ರಾಜ್ಯಕ್ಕೆ ಮಹಿಮರಾದ ಋಷಿಗಳ ಆಗಮನವಾದರೆ ರಾಜರಿಗೆ ಯಾವಾಗಲೂ ಸಂತೋಷವೇ ಸರಿ. ದೃಢವರ್ಮನು ಸಂಭ್ರಮದಿಂದ ನಾರದರನ್ನು ಎದುರುಗೊಂಡು ಆಸ್ಥಾನಕ್ಕೆ ಕರೆದು ತಂದನು. ಗೌರವದಿಂದ ಅವನನ್ನು ಸತ್ಕರಿಸಿದನು. ಉಚಿತವಾದ ಆಸನವನ್ನು ಕೊಟ್ಟು ಕುಳ್ಳಿರಿಸಿದನು. ಮತ್ತೆ ಕೈಮುಗಿದು ತಲೆಬಾಗಿ ನಿಂತುಕೊಂಡನು.

ನಾರದನು ದೃಢವರ್ಮನ ಸತ್ಕಾರದಿಂದಲೂ ವಿನಯಗುಣದಿಂದಲೂ ಸುಪ್ರೀತನಾದನು. ಆದರೆ ಅವನಿಗೆ ರಾಜನ ಬಾಡಿದ ಮುಖವು ಕಾಣದಿರಲಿಲ್ಲ. ಕಾರಣ ತಿಳಿಯದೆ ಅವನು–

"ರಾಜನೆ, ನಿನ್ನ ಸುಂದರವಾದ ಮುಖವು ಈ ರೀತಿಯಲ್ಲಿ ಕಂದಿಹೋಗಲು ಕಾರಣವೇನು?" ಎಂಬುದಾಗಿ ಕೇಳಿದನು.

"ಪೂಜ್ಯರೆ, ನನ್ನ ಮನಸ್ಸಿನ ವಿಚಾರವನ್ನು ತಮಗೆ ಪ್ರತ್ಯೇಕವಾಗಿ ನಾನು ವಿವರಿಸುವುದೇಕೆ? ತ್ರಿಕಾಲಜ್ಞಾನಿಗಳಾಗಿರುವ ತಮಗೆ ಎಲ್ಲವೂ ತಿಳಿದಿವೆ. ಆದರೂ ತಾವು ಕೇಳುತ್ತಿರುವಾಗ ನಾನು ಹೇಳದಿರಲಿಕ್ಕಾಗುವುದಿಲ್ಲ. ನನಗೆ ಈ ತನಕವೂ ಪುತ್ರರು ಹುಟ್ಟಿರುವುದಿಲ್ಲ. ನನ್ನ ರಾಜ್ಯಕ್ಕೆ ಮುಂದೆ ದಿಕ್ಕಿಲ್ಲವಾಗುವುದು. ಅಷ್ಟೇ ಅಲ್ಲ, ಪುತ್ರರಿಲ್ಲದವರಿಗೆ ಇಹದಲ್ಲಿ ಹೇಗೆ ಸುಖವಿಲ್ಲವೋ ಹಾಗೆಯೇ ಪರದಲ್ಲಿಯೂ ಸದ್ಗತಿಯಿಲ್ಲವೆಂಬುದನ್ನು ಕೇಳಿದ್ದೇನೆ. ಇದೊಂದೇ ಚಿಂತೆಯು ನನ್ನನ್ನು ಕಾಡುತ್ತಿದೆ"

–ಎಂದು ರಾಜನು ದೀನನಾಗಿ ಬಿನ್ನವಿಸಿದನು.

ಅವನ ಮಾತನ್ನು ಕೇಳಿ ನಾರದ ಋಷಿಯು–

"ರಾಜನೆ, ಈ ವಿಷಯಕ್ಕಾಗಿ ನೀನು ಮರುಗಬೇಡ. ಶಿವನ ಕೃಪೆಯಿಂದ ನಿನಗೆ ಸಂತಾನವಾಗುವುದು. ಇದೊ, ಈ ಮಾವಿನ ಹಣ್ಣನ್ನು ತೆಗೆದುಕೊ! ಇದು ವಿಶೇಷತರದ ಔಷಧೀಯ ಗುಣಗಳಿಂದ ಕೂಡಿದುದಾಗಿದೆ. ಇದನ್ನು ನಿನ್ನ ಪತ್ನಿಯು ಸೇವಿಸಲಿ. ಮುಂದೆ ನಿಮಗೆ ಒಂದು ಪುತ್ರೀರತ್ನವು ಜನಿಸುವುದು"

–ಎಂಬುದಾಗಿ ಅಭಯವಿತ್ತು ಸಂತೈಸಿದನು.

ರಾಜನು ಆ ಚೂತಫಲವನ್ನು ಭಕ್ತಿಯಿಂದ ಸ್ವೀಕರಿಸಿದನು. ಕೃತಜ್ಞತೆಯಿಂದ ಮುನಿಯ ಪಾದಗಳಿಗೆ ವಂದಿಸಿದನು.

ನಾರದನು ತೆರಳಿದ ಮೇಲೆ ರಾಜನು ತನ್ನ ರಾಣಿಯಾದ ಸೌರಂಭೆಯನ್ನು ಕಂಡು–

"ಪ್ರಿಯೆ, ನಾರದರೆಂಬ ಋಷಿಶ್ರೇಷ್ಠರು ಈ ಚೂತಫಲವನ್ನು ಕರುಣಿಸಿ ಹೋಗಿರುವರು. ಇದನ್ನು ನೀನು ಸೇವಿಸಿದರೆ ಪುತ್ರಿಯೊಬ್ಬಳನ್ನು ಪಡೆಯುವೆಯಂತೆ"

ಎನ್ನುತ್ತಾ ಉತ್ಸಾಹದಿಂದಲೂ ಸಂತೋಷದಿಂದಲೂ ಅವಳ ಕೈಗಿತ್ತನು.

ಸೌರಂಭೆಗೆ ಆ ಮಾತುಗಳನ್ನು ಕೇಳಿ ಉಂಟಾದ ಆನಂದವಷ್ಟಿಷ್ಟಲ್ಲ. ತನ್ನೆರಡೂ ಕೈಗಳನ್ನು ಮುಂದೊಡ್ಡಿ ಅವಳದನ್ನು ತೆಗೆದುಕೊಂಡಳು. ತಾನು ಕಂಡಿತವಾಗಿಯೂ ಸಂತಾನವತಿಯಾಗುತ್ತೇನೆ- ಎಂಬ ದೃಢವಿಶ್ವಾಸದಿಂದ, ಶಿವನನ್ನು ಧ್ಯಾನಿಸುತ್ತ ಆ ಫಲವನ್ನು ಅವಳು ತಿಂದಳು.

ಸ್ವಲ್ಪ ಸಮಯದಲ್ಲೇ ಸೌರಂಭೆಯು ಗರ್ಭವತಿಯಾದಳು!

ರಾಜನಿಗೆ ಈ ವಿಷಯವು ತಿಳಿಯಲು ಅವನ ಸಂತೋಷಕ್ಕೆ ಪಾರವಿಲ್ಲವಾಯಿತು. ತಿಂಗಳುಗಳು ಉರುಳಿದವು. ರಾಜನು ಯೋಗ್ಯರಾದ ಪುರೋಹಿತರನ್ನು ಕರೆಯಿಸಿ ಸುಮುಹೂರ್ತದಲ್ಲಿ ಸಂಭ್ರಮದಿಂದ ಸೀಮಂತವನ್ನು ಏರ್ಪಡಿಸಿದನು.

ಪ್ರಜೆಗಳಿಗೂ ಸಂತೋಷವೇ ಸಂತೋಷ!

ಬ್ರಾಹ್ಮಣರಿಗೆ, ಬಡಬಗ್ಗರಿಗೆ ಯಥೇಚ್ಛವಾಗಿ ದಾನ ಧರ್ಮಾದಿಗಳು ಸಂದುವು.

ಅಂಗದೇಶವು ಸಂಭ್ರಮ-ಉತ್ಸವಗಳ ನೆಲೆಯೂರೆನಿಸಿತು.

ಸೀಮಂತವು ಕಳೆದು ಸೌರಂಭೆಗೆ ಒಂಬತ್ತು ತಿಂಗಳುಗಳು ಪೂರ್ಣವಾಗಲು ಹತ್ತನೆಯ ತಿಂಗಳ ಮೊದಲ ವಾರದಲ್ಲಿ ಅವಳು ಒಂದು ಸುಂದರವಾದ ಹೆಣ್ಣು ಮಗುವನ್ನು ಪಡೆದಳು.

ಶುಭಮುಹೂರ್ತದಲ್ಲಿ ಜನನವಾದ ಸಂಗತಿಯನ್ನು ತಿಳಿದ ರಾಜ-ದೃಢವರ್ಮನು ತನ್ನ ನಗರವನ್ನು ಸಿಂಗರಿಸುವಂತೆ ಏರ್ಪಡಿಸಿದನು.

ರಾಜನ ಇಚ್ಛೆಯಂತೆ ಮಂತ್ರಿಯು ಎಲ್ಲವನ್ನೂ ಏರ್ಪಡಿಸಿ, ಮತ್ತೊಮ್ಮೆ ಹೇರಳವಾಗಿ ದಾನಧರ್ಮಾದಿಗಳನ್ನಿತ್ತನು. ಮತ್ತೊಮ್ಮೆ ಅಂಗದೇಶವು ಸಂಭ್ರಮೋತ್ಸವಗಳ ನೆಲೆಯೂರೆನಿಸಿತು.

ಹತ್ತನೆಯ ದಿನಕ್ಕೆ ಪದ್ಧತಿಯಂತೆ 'ಪುಣ್ಯಾರ್ಚನೆ' ನಡೆದು, ಹನ್ನೆರಡನೆಯ ದಿನಕ್ಕೆ ನಾಮಕರಣದ ಸಮಾರಂಭವು ನೆರವೇರಿತು. ಆಗಲೂ ಬ್ರಾಹ್ಮಣಶ್ರೇಷ್ಠರು ನೆರೆದಿದ್ದರು. ರಾಣಿ-ಸೌರಂಭೆಯು ಸಹಿತ ಎಲ್ಲರೊಮ್ಮತದಿಂದ ರತ್ನಾವತಿ ಎಂಬ ಸುಂದರ ನಾಮವನ್ನು ಶಿಶುವಿಗಿರಿಸಿದರು.

ರತ್ನಖಚಿತವಾಗಿದ್ದ ಬಂಗಾರದ ತೊಟ್ಟಿಲಲ್ಲಿ ಶಿಶುವನ್ನಿರಿಸಿ ತೂಗಿದರು.

‡ ‡ ‡ ‡

ಶಿಶು ರತ್ನಾವತಿಯು ದಿನದಿನಕ್ಕೆಂಬಂತೆ ಬಳೆದಳು.

ಅವಳ ಬಾಲಲೀಲೆಗಳು ತುಂಬಾ ಮುದ್ದಾಗಿದ್ದು ತಂದೆತಾಯಂದಿರನ್ನೂ ದಾಸದಾಸಿಯರನ್ನೂ ಹರ್ಷಗೊಳಿಸಿದವು.

ಅವಳು ತನ್ನ ಪುಟ್ಟ ಕೈಗಳನ್ನು ತಿರುಗಿಸುತ್ತಾ ಮುಗುಳು ನಗುತ್ತಿರುವಾಗ ಮನ್ಮಥನ ಅಂಗೈಯ ಅರಗಿಣಿಯಂತೆ ಶೋಭಿಸುತ್ತಿದ್ದಳು. ಮುಖವು ಚಂದ್ರನ ಬಿಂಬಕ್ಕಿಂತಲೂ ಕಾಂತಿಯುಕ್ತವಾಗಿತ್ತು. ಇಂಥಾ ಮಗುವು ಈ ಭೂಮಿಯಲ್ಲಿ ಈ ಹಿಂದೆ ಎಲ್ಲಿಯಾದರೂ ಹುಟ್ಟಿದೆಯೋ ಇಲ್ಲವೋ ಎಂಬ ಸಂಶಯವನ್ನು ಉಂಟುಮಾಡುತ್ತಾ ಶಿಶು ರತ್ನಾವತಿಯು ಕಂಗೊಳಿಸುತ್ತಿದ್ದಳು.

ವರ್ಷಗಳು ಕಳೆಯುತ್ತಾ ಬಂದಂತೆ ರತ್ನಾವತಿಯು ಬಣ್ಣವೇರಿ ಹದಿನಾರು ವರ್ಷಗಳನ್ನು ತುಂಬಿದಳು. ರಾಜನು ತನ್ನ ಮಗಳ ಬಳವಿಯನ್ನು ನೋಡಿ ಅಭಿಮಾನಗೊಂಡನು.

ಮದುವೆಗೆ ಯೋಗ್ಯವಾಗಿರುವ ಪ್ರಾಯದವಳಾದ ತನ್ನ ಮಗಳ ಕುರಿತು ದೃಢವರ್ಮನು ಮುಂದಿನ ವ್ಯವಸ್ಥೆಗೆ ತೊಡಗಲೇಬೇಕಾಗಿತ್ತು. ಲಗ್ನಕ್ಕೆ ಬಳೆದು ನಿಂತಿರುವ ಕುಮಾರಿಯನ್ನು ಸಕಾಲದಲ್ಲಿ ವಿವಾಹಮಾಡಿ ಕೊಡದಿದ್ದರೆ ಅದರಿಂದ ಕುಲಕ್ಕೇ ಅವಮಾನ ಬರುವುದು.

ರಾಜನು ತನ್ನ ಮಂತ್ರಿಯೊಡನೆ,

"ಕುಶುಂಬಿ ದೇಶದ ದೊರೆಯಾಗಿರುವ ವತ್ಸರಾಜನಿಗೆ ನನ್ನ ಮಗಳನ್ನು ಲಗ್ನಮಾಡಿಕೊಡುವುದೆಂದು ನಿಶ್ಚಯಿಸಿದ್ದೇನೆ."

–ಎಂಬುದಾಗಿ ತನ್ನ ನಿರ್ಧಾರವನ್ನು ತಿಳಿಸಿದನು.

ಆ ಮಾತು ಮಂತ್ರಿಗೂ ಒಡಂಬಡದಿರಲಿಲ್ಲ.

ರಾಣೀವಾಸಕ್ಕೂ ಒಪ್ಪಿಗೆಯಾಯಿತು. ರತ್ನಾವತಿಗೂ ತಿಳಿಯಿತು.

ಆದರೆ ಅದೃಷ್ಟವು ಹೇಗಿದೆಯೆಂದು ಯಾರು ತಾನೆ ಬಲ್ಲರು?

೨

ಕೊಡೆನೆಂದ ಕನ್ಯೆಯನ್ನು ಬಿಡೆನೆಂದ ಭದ್ರಸೇನ!

ಕಳಿಂಗದೇಶವನ್ನು ಭದ್ರಸೇನನೆಂಬ ಪ್ರತಾಪಿಯಾದ ರಾಜನು ಆಳಿ ಕೊಂಡಿದ್ದನು. ಅವನು ಶೂರನೂ ತರುಣನೂ ಆಗಿದ್ದನಲ್ಲದೆ ತನ್ನ ಇಚ್ಛೆ ಯನ್ನು ಈಡೇರಿಸಿಕೊಳ್ಳುವುದರಲ್ಲಿ ಕಠಿನ ಮನಸ್ಸಿನವನೂ ಆಗಿದ್ದನು. ಎಂಥಾ ಅಡ್ಡಿ ತಡೆಗಳು ಬಂದರೂ ಲೆಕ್ಕಿಸುವವನಾಗಿರಲಿಲ್ಲ.

ಒಂದು ದಿನ ಭದ್ರಸೇನನು ತನ್ನ ಓಲಗವನ್ನು ನಡೆಯಿಸುತಿದ್ದನು. ಮಂತ್ರಿಗಳು, ಮಾಗಧರು ಉಚಿತಾಸನಗಳಲ್ಲಿ ಕುಳಿತಿದ್ದರು. ವಂದಿಗಳು ರಾಜನ ಪ್ರತಾಪಾದಿಗಳನ್ನು ಹೊಗಳುತಿದ್ದರು.

ಅಷ್ಟರಲ್ಲಿ ಬಾಗಿಲು ಕಾಯುವ ಚಾರಕನೊಬ್ಬನು ಒಳಗೆ ಬಂದು,

"ಪ್ರಭುವೆ, ದ್ವಾರದಲ್ಲಿ ಯಾತ್ರಿಕರಾದ ಬ್ರಾಹ್ಮಣರು ಬಂದಿದ್ದಾರೆ"
—ಎಂಬುದಾಗಿ ಅರಿಕೆಮಾಡಿದನು.

"ಅವರನ್ನು ಒಳಕ್ಕೆ ಬಿಡಬಹುದು"
—ರಾಜನು ದರ್ಪದಿಂದ ಆಜ್ಞಾಪಿಸಿದನು.

ಚಾರಕನು ರಾಜನನ್ನು ವಂದಿಸಿ ಹಿಂದೆ ನಡೆದು ಬಾಗಿಲಲ್ಲಿ ಕಾಯು ತ್ತಿದ್ದ ಬ್ರಾಹ್ಮಣರೊಡನೆ,

"ನೀವು ಆಸ್ಥಾನವನ್ನು ಪ್ರವೇಶಿಸಬಹುದೆಂದು ದೊರೆಗಳು ಅಪ್ಪಣೆ ಯಿತ್ತಿರುವರು" ಎಂದನು.

ಬ್ರಾಹ್ಮಣರು ಒಳಕ್ಕೆ ಬಂದು ಉತ್ಸಾಹದಿಂದ ರಾಜನನ್ನು ಆಶೀರ್ವದಿಸಿ ದರು.

ರಾಜನು ಸಂತುಷ್ಟನಾಗಿ—

"ನೀವು ಬ್ರಾಹ್ಮಣರಾಗಿರುವಿರಿ. ಎಲ್ಲಿಂದ ಬಂದವರು? ಯಾತ್ರಿಕರಾಗಿ ಪ್ರಯಾಣ ಮಾಡುವಂತೆ ತೋರುತ್ತಿದೆ. ಯಾವ ಊರಿಗೆ ಹೊರಟಿರುವಿರಿ? ನನ್ನೊಡನೆ ಸಂಕೋಚವಿಲ್ಲದೆ ಹೇಳಿರಿ" ಎಂದನು.

"ಗುಣಶಾಲಿಯಾದ ಮಹಾರಾಜನೆ, ನಾವು ದೇಶ ಸಂಚಾರಕ್ಕಾಗಿಯೇ ಹೊರಟವರೆಂಬುದು ನಿಜ. ಎಲ್ಲೆಲ್ಲೋ ಸುತ್ತಿಕೊಂಡು ಗಂಗಾ ನದಿಯಲ್ಲಿ ಸ್ನಾನಮಾಡಿ ಮುಂದುವರಿದೆವು. ಆ ನದೀತಟದಲ್ಲಿರುವ ಅಂಗ ದೇಶವನ್ನು ಪ್ರವೇಶಿಸಿ, ಅಲ್ಲಿಯ ದೊರೆಯಾಗಿರುವ ದೃಢವರ್ಮ ರಾಜನನ್ನು ಕಂಡೆವು. ಬಳಿಕ ಅಲ್ಲಿಂದ ಹೊರಟು ಈ ದಾರಿಯಾಗಿ ಇಲ್ಲಿಗೆ ಬಂದಿರುತ್ತೇವೆ. ಯಾತ್ರಾರ್ಥಿಗಳಾಗಿರುವ ನಮಗೆ ನೀನು ಉದಾರನಾಗಿ ಏನನ್ನಾದರೂ ಅನುಗ್ರಹಿಸಿದರೆ ಸಂತೋಷದಿಂದ ಸ್ವೀಕರಿಸಿ ಮುಂದೊತ್ತುತ್ತೇವೆ"
–ಎಂದು ಬ್ರಾಹ್ಮಣರು ತಮ್ಮ ಬರುವಿಕೆಯ ಕಾರಣವನ್ನು ಹೇಳಿದರು.

ಭದ್ರಸೇನನಿಗೆ ಅವರ ಮಾತುಗಳಿಂದ ತೃಪ್ತಿಯಾಗಿ ಬೇಕಾದ ಉಚಿತ ಉಡುಗೊರೆಗಳನ್ನೆಲ್ಲ ಕೊಡಿಸಿದನು. ಭೋಜನಕ್ಕೆ ಅಣಿಗೊಳಿಸಿದನು.

"ನೀವು ನಿತ್ಯವೂ ತಿರುತಿರುಗಿ ದಣಿದಿರುವಿರಿ. ದೇಹವನ್ನು ಹುಲ್ಲಿಗೆ ಸಮವೆಂದೆಣಿಸಿ ಶ್ರಮವನ್ನು ಲೆಕ್ಕಿಸದೆ ದೇಶದೇಶಗಳನ್ನು ಸುತ್ತಾಡಿ ಬಂದಿರು

ವಿರಿ. ನನ್ನಲ್ಲಿ ನಾಲ್ಕು ದಿನ ಉಳಿದು, ನಿಮ್ಮೆಲ್ಲರ ಆಯಾಸ ಪರಿಹರಿಸಿ ಕೊಂಡು ಹೋಗಬೇಕು ಎಂದು ನನ್ನ ಬಿನ್ನಹ"

—ಎಂದು ರಾಜನು ಕೇಳಿಕೊಂಡನು.

ಅವರು ಆಗದೆನ್ನುವರೆ? ಒಪ್ಪಿಕೊಂಡರು. ಪುನಃ ಭದ್ರಸೇನನು,

"ಇಷ್ಟೇ ಅಲ್ಲ; ನನಗಿನ್ನೊಂದು ಅಪೇಕ್ಷೆಯೂ ಇದೆ. ನೀವು ಸುತ್ತಾ ಡಿರುವ ಹಲವಾರು ಸ್ಥಳಗಳಿವೆ, ನಗರಗಳಿವೆ, ಪುಣ್ಯಕ್ಷೇತ್ರಗಳಿವೆ. ಅಲ್ಲೆಲ್ಲ ನೀವು ಕಂಡಿರುವ ವಿಚಿತ್ರಗಳನ್ನು, ವಿಶೇಷ ಸಂಗತಿಗಳನ್ನು ಕೇಳುವುದಕ್ಕೆ ನನ್ನ ಮನಸ್ಸು ಬಯಸುತ್ತಾ ಇದೆ. ಹೇಳಿದರೆ ನನಗೆ ತುಂಬಾ ಸಂತೋಷ ವಾಗುವುದು" ಎಂದನು.

ಅದಕ್ಕೊಬ್ಬ ಬ್ರಾಹ್ಮಣನು,

"ರಾಜನೆ, ನಾವು ಎಷ್ಟೆಂದರೂ ಬ್ರಾಹ್ಮಣರು. ನಮ್ಮ ಗಮನವು ಕೇವಲ ಯಾತ್ರೆಯ ಮೇಲಿರುವುದೇ ಹೊರತು ಹೊಸ ವಿಚಾರ, ವಿಚಿತ್ರ ಸಂಗತಿಗಳ ಕಡೆಗಿರುವುದಿಲ್ಲ. ನಮಗೇನು ತಿಳಿಯಬಲ್ಲುದು?" ಎಂದನು.

ಅವನ ಮಾತಿನ ರೀತಿಯನ್ನು ಕಂಡ ರಾಜನು ಅವನೇನನ್ನೋ ವಿಶೇಷ ಸಂಗತಿಯನ್ನು ಹೇಳಲಿರುವನೆಂದು ಊಹಿಸಿಕೊಂಡನು. ಬ್ರಾಹ್ಮಣನು ಮುಂದುವರಿಸಿದನು.

"ಮಹಾರಾಜನೆ, ದೃಢವರ್ಮರಾಜನಿಗೊಬ್ಬಳು ಸುಪುತ್ರಿಯಿದ್ದಾಳೆ. ಅವಳ ಹುಟ್ಟಿನ ಕಥೆಯಾದರೂ ಒಂದು ಚರಿತ್ರೆಯಂತೆಯೇ ಇದೆ. ಆ ರಾಜ ನಿಗೆ ಬಹುಕಾಲದ ವರೆಗೆ ಮಕ್ಕಳಿರಲಿಲ್ಲ. ಆದುದರಿಂದ ರಾಜನು ಎಷ್ಟೋ ವರ್ಷಗಳ ತನಕ ತುಂಬಾ ವ್ಯಸನದಿಂದಿದ್ದನು. ಕಡೆಗೊಂದು ದಿನ ನಾರದ ಋಷಿಗಳು ದೃಢವರ್ಮನ ಆಸ್ಥಾನಕ್ಕೆ ಹೋಗಿ ಒಂದು ಚೂತಫಲವನ್ನು ಕೊಟ್ಟರಂತೆ. ರಾಜನು ಅದನ್ನು ತನ್ನ ರಾಣಿಯಾದ ಸೌರಂಭೆಗೆ ಇತ್ತನು. ಸೌರಂಭೆಯು ಅದನ್ನು ತಿಂದು ಸುಪುತ್ರಿಯನ್ನು ಪಡೆದಳು. ರಾಜನೆ, ಆ ಕುಮಾರಿಯನ್ನು ಏನೆಂದು ವರ್ಣಿಸಲಿ? ಬಲುಚೆಲುವೆ! ಆ ವಿಷಯ ಹಾಗಿ ರಲಿ. ತನ್ನ ಮಗಳು ಮದುವೆಗೆ ಬಳೆದು ನಿಂತುದನ್ನು ಕಂಡು ದೃಢ ವರ್ಮನು ಅವಳನ್ನು ಕುಶುಂಬಿ ದೇಶದ ವತ್ಸರಾಜನಿಗೆ ಕೊಡುವುದೆಂದು ನಿರ್ಧರಿಸಿರುತ್ತಾನೆ. ಇಷ್ಟೇ ನಮಗೆ ತಿಳಿದಿರುವ ಹೊಸತು ಸುದ್ದಿ."

ಭದ್ರಸೇನನಿಗೆ ಬ್ರಾಹ್ಮಣನು ಹೇಳಿದ ವಿವರವನ್ನು ಕೇಳಿ ಮನಸ್ಸು ತಿರುಗಿ, ಮಂತ್ರಿಯೊಡನೆ-

"ಮಂತ್ರಿವರ್ಯ, ಬ್ರಾಹ್ಮಣರು ಹೇಳಿದ ಸಂಗತಿಯನ್ನು ಕೇಳಿದೆಯ? ಅವರ ಮಾತು ಸುಳ್ಳಾಗಿರಲಾರದು. ಅಂಗದೇಶದ ಅರಸು ದೃಢವರ್ಮನಿಗೆ ಬಹಳ ಚೆಲುವೆಯಾಗಿರುವ ಒಬ್ಬಳು ಮಗಳು ಹುಟ್ಟಿರುವಳಂತೆ. ಅವಳಿಗೆ ಮದುವೆಯಾಗುವ ಪ್ರಾಯವಂತೆ. ಆದರೆ, ಅವಳ ತಂದೆಯು ಅವಳನ್ನು ವತ್ಸರಾಜನಿಗೆ ವಿವಾಹಮಾಡಿಕೊಡುವುದೆಂದು ನಿಶ್ಚಯಿಸಿರುವನಂತೆ. ಆದುದರಿಂದ ನೀನೀಗ ಒಡನೆಯೇ ಅಂಗದೇಶಕ್ಕೆ ಕಂಚುಕಿಗಳನ್ನು ಕಳುಹಿಸಿಕೊಡಬೇಕು. ಒಂದು ಪತ್ರವನ್ನು ಬರೆದು- ಅದರಲ್ಲಿ ದೃಢವರ್ಮನ ಕುಮಾರಿಯನ್ನು ನಾನು ಲಗ್ನವಾಗಲು ಅಪೇಕ್ಷಿಸುತ್ತೇನೆಂದು ತಿಳಿಸಬೇಕು. ಜೊತೆಗೆ ಕಾಣಿಕೆಯಾಗಿ ನಮ್ಮ ಭಂಡಾರದ ಸುವಸ್ತುಗಳನ್ನೂ ಕಳುಹಿಸು"

ಎಂದು ನಿರ್ಧರವಾಗಿ ಆಜ್ಞಾಪಿಸಿದನು.

ಮಂತ್ರಿಯು ರಾಜನ ಇಚ್ಛೆಯಂತೆ ಪತ್ರವನ್ನೂ ಸುವಸ್ತುಗಳನ್ನೂ ದೂತರೊಡನೆ ಕೊಟ್ಟು ಅಂಗದೇಶಕ್ಕೆ ಕಳುಹಿಸಿದನು.

† † † †

ದೃಢವರ್ಮ ರಾಜನಲ್ಲಿಗೆ ತ್ವರೆಯಾಗಿ ಬಂದ ಕಂಚುಕಿಗಳನ್ನು ಕಂಡು ರಾಜನಿಗೆ ಆಶ್ಚರ್ಯವಾಯಿತು. ಅವನು ಅವರನ್ನು ಬರಮಾಡಿಕೊಂಡು-

"ನೀವು ಯಾರು? ಎಲ್ಲಿಂದ ಬಂದಿರಿ? ಈ ಸುವಸ್ತುಗಳನ್ನು ಯಾರು ಕೊಟ್ಟರು?"

-ಎಂದು ವಿಚಾರಿಸಿದನು.

"ಮಹಾರಾಜರೆ, ನಾವು ಕಂಚುಕಿಗಳು. ಈ ವಸ್ತುಗಳನ್ನೆಲ್ಲ ನಮ್ಮ ದೊರೆಗಳು ಕೊಟ್ಟಿದ್ದಾರೆ. ಅಲ್ಲದೆ ಈ ಪತ್ರವನ್ನೂ ಕೊಟ್ಟಿರುತ್ತಾರೆ"

-ಎಂಬುದಾಗಿ ಹೇಳಿ ಕಂಚುಕಿಗಳು ಪತ್ರವನ್ನು ರಾಜನ ಕೈಗಿತ್ತರು.

ರಾಜನು ತನ್ನ ಮಂತ್ರಿಯನ್ನು ಕರೆದು ಆ ಪತ್ರವನ್ನು ಓದಲು ಹೇಳಿದನು.

"ಮಿತ್ರರೆಂಬ ತಾವರೆಗಳ ಬಳಗಕ್ಕೆ ಸೂರ್ಯನಂತೆ ಮೆರೆಯುತ್ತಿರುವ ಮಹಾರಾಜ ದೃಢವರ್ಮ ಪ್ರಭುಗಳಿಗೆ, ಶ್ರೇಷ್ಠ ಕಳಿಂಗ ದೇಶದ ದೊರೆಯಾಗಿ

ರುವ ಭದ್ರಸೇನನು ಸ್ನೇಹದಿಂದ ಬರೆದಿರುವ ಪತ್ರವಿದು.

ನಾವು ಈ ತನಕ ದೇವರ ದಯೆಯಿಂದ ಕ್ಷೇಮದಿಂದಿದ್ದೇವೆ. ತಮ್ಮ ಕುಟುಂಬದ ಯೋಗಕ್ಷೇಮಾದಿಗಳನ್ನು ತಿಳಿಸಿ ನಮಗೆ ಮರುತ್ತರವನ್ನು ಕೊಡಬೇಕು.

ಮಹಾರಾಜರೆ, ತಮ್ಮ ರಾಣಿಯವರು ಪಡೆದಿರುವ ಸುಪುತ್ರಿಯ ಚೆಲುವಿನ ಸಂಗತಿಯನ್ನು ನಾನು ತಿಳಿದುಕೊಂಡಿದ್ದೇನೆ. ಅವಳನ್ನೇ ವಿವಾಹವಾಗಬೇಕೆಂದು ಬಯಸುತ್ತಿದ್ದೇನೆ. ಆದುದರಿಂದ ತಮ್ಮ ಸುಕುಮಾರಿಯನ್ನು ನನಗೆ ವಿವಾಹಮಾಡಿಕೊಡಬೇಕಾಗಿ ಕೇಳಿಕೆ......"

ಮಂತ್ರಿಯು ಓದಿದ ಪತ್ರದ ಅಭಿಪ್ರಾಯವನ್ನು ತಿಳಿದು ದೃಢವರ್ಮನು ಸ್ವಲ್ಪ ಹೊತ್ತು ಯೋಚಿಸಿದನು. ಕಡೆಗೆ ಹೀಗೆಂದನು.

"ಮಂತ್ರಿ, ನನ್ನ ಮಗಳನ್ನು ವತ್ಸರಾಜನಿಗೆ ಕೊಡುವೆನೆಂಬುದಾಗಿ ಮೊದಲೇ ನಿಶ್ಚಯವಾಗಿಹೋಗಿದೆ. ಈಗ ಏನುಮಾಡುವುದಕ್ಕೂ ಉಪಾಯವಿಲ್ಲವಾಗಿದೆ. ಆದುದರಿಂದ ಈ ರಾಜನು ಬೇರೊಂದು ಕನ್ಯೆಯನ್ನು ನೋಡಿ ವಿವಾಹವಾಗುವುದು ಒಳ್ಳೆಯದು. ಹೀಗೆ ತಿಳಿಸಬೇಕಾಗಿ ಬಂದುದಕ್ಕೆ ಆ ರಾಜನು ಬೇಸರಪಟ್ಟುಕೊಳ್ಳಬಾರದೆಂದು ನೀನು ಬರೆದು ತಿಳಿಸು."

ದೃಢವರ್ಮನ ಅಭಿಪ್ರಾಯವನ್ನು ಮಂತ್ರಿಯು ಪತ್ರದಲ್ಲಿ ವಿವರಿಸಿ, ಬಂದಿದ್ದ ದೂತರ ವಶಕೊಟ್ಟು ಕಳುಹಿಸಿದನು.

§ § § §

ಭದ್ರಸೇನನು ದೂತರು ತಂದುಕೊಟ್ಟ ಮರುತ್ತರವನ್ನು ಓದಿ ಕೋಪದಿಂದ ಕಿಡಿಕಿಡಿಯಾದನು. ತನ್ನ ಮಂತ್ರಿಯೊಡನೆ ಮೆಚ್ಚಿಸುತ್ತಾ—

"ಈ ರಾಜನು ಬರೆದು ಕಳುಹಿಸಿರುವುದನ್ನು ನೋಡು! ತನ್ನ ಕುಮಾರಿಯನ್ನು ನನಗೆ ವಿವಾಹ ಮಾಡಿಕೊಡಲಾಗುವುದಿಲ್ಲವೆಂದು ಹೇಳಿ ನನ್ನನ್ನು ಅಪಮಾನಗೊಳಿಸಿದ್ದಾನೆ. ಇಂಥಾ ಗರ್ವವೂ ಬಂದುಹೋಯಿತೆ? ವತ್ಸರಾಜನು ಮಾತ್ರ ಒಬ್ಬ ರಾಜನೆ? ನಾವೆಲ್ಲ ಗೋವಳರ ಮಕ್ಕಳೆ? ಈ ಕೆಟ್ಟ ರಾಜನು ಹೀಗೆಲ್ಲ ಹೀಯಾಳಿಸಿರುವನೆಂದ ಮೇಲೆ ನಾವಿನ್ನು ಆ ಕನ್ಯೆಯನ್ನು ಬಿಡುವುದಕ್ಕೆ ಸಾಧ್ಯವಿದೆಯೆ? ಬೇರೊಂದು ಕನ್ಯೆಯನ್ನು ನೋಡಿ ವಿವಾಹ

ವಾಗವುದು ಒಳ್ಳೆಯದೆಂದು ಬುದ್ಧಿ ಹೇಳುವುದಕ್ಕೂ ಹೊರಟನಲ್ಲ? ಸಮುದ್ರದ ನೀರನ್ನು ಉಪಯೋಗಿಸಬೇಕಾದರೆ ಯಾರ ಅಪ್ಪಣೆಯೂ ಅಗತ್ಯವಿಲ್ಲ. ಹಾಗೆಯೇ ಬೇರೊಂದು ಹುಡುಗಿಯನ್ನು ವಿವಾಹವಾಗಬೇಕಾಗಿದ್ದರೆ ಈತನು ನಮಗೆ ಹೇಳಬೇಕೆ? ಇವನ ಹುಡುಗಿಯ ಗೊಡವೆಯನ್ನು ನಾನು ಬಿಡುವುದುಂಟೆ? ಈ ರಾಜ್ಯದ ಒಡೆತನವನ್ನು ನನಗೆ ಇವನು ಕೊಟ್ಟಿರುವನೆ? ಈ ಬಡರಾಯನ ಬಡಿವಾರಗಳನ್ನೆಲ್ಲ ನಾನು ನಿಲ್ಲಿಸಿಯೇ ಬಿಡುತ್ತೇನೆ. ಮತ್ತೂ ಮುಂದುವರಿದನೆಂದರೆ ಅವನನ್ನು ಜೀವದಲ್ಲಿಯೂ ಇರಗೊಡುವುದಿಲ್ಲ. ಎಲೋ ಮಂತ್ರಿ, ಕೂಡಲೇ ನಮ್ಮ ಸೈನ್ಯಗಳನ್ನು ಕರೆಯಿಸು. ನಾನೇ ಹೋಗಿ ಕನ್ಯೆಯನ್ನು ಕರೆದುತರುತ್ತೇನೆ. ಅವನ ನಗರಕ್ಕೆ ಮುತ್ತಿಗೆ ಹಾಕಿ ಗರ್ವವಿಳಿಸಿ ಬರುತ್ತೇನೆ” ಎಂದನು.

ಭದ್ರಸೇನನ ಪ್ರಯಾಣಕ್ಕೆ ಎಲ್ಲವೂ ಸಿದ್ಧವಾದವು.

ನಾಲ್ಕು ವಿಧದ ಸೈನ್ಯಗಳೆಲ್ಲ ಸಂಗ್ರಹವಾಗಿ ಅಪ್ಪಣೆಯನ್ನು ಕಾದು ನಿಂತವು.

ಅದನ್ನು ಮಂತ್ರಿಯ ಮಗನಾಗಿದ್ದ ಚಿತ್ರಧ್ವಜನೆಂಬವನು ದೂರದಿಂದ ಕಂಡನು. ಅವನ ಎಳೆರಗುತಕ್ಕೆ ಯುದ್ಧದ ವಾರ್ತೆಯು ಹೊಸ ಹುರುಪನ್ನು ಕೊಟ್ಟಿತು.

ರಾಜನ ಬದಲಾಗಿ, ರಾಜನಿಗಾಗಿ ತಾನೇ ಹೋಗಬೇಕು; ಯುದ್ಧ ಮಾಡಬೇಕು, ಗೆಲ್ಲಬೇಕು; ಗೆದ್ದು ರಾಜನ ಇಚ್ಛೆಯನ್ನು ಪೂರೈಸಿ ಮೆಚ್ಚುಗೆಯನ್ನು ಪಡೆಯಬೇಕು– ಎಂಬುದಾಗಿ ಅವನು ಉತ್ಸಾಹಗೊಂಡನು.

ಯುದ್ಧದ ಪ್ರಯಾಣದ ಕಾರಣವನ್ನು ಯಾರಿಂದಲೋ ಕೇಳಿ ತಿಳಿದುಕೊಂಡು ಅವನು ರಾಜನ ಎದುರಿಗೆ ಬಂದು ನಮಸ್ಕರಿಸಿದನು.

“ಮಹಾಪ್ರಭುಗಳೆ, ಒಬ್ಬ ಸಾಮಾನ್ಯ ರಾಜನನ್ನು ಗೆಲ್ಲುವುದಕ್ಕೆ ತಾವೇಕೆ ಹೋಗುತ್ತೀರಿ? ಇದು ಮರ್ಯಾದೆಯಲ್ಲ. ಬಡ ಕುರಿಗಳನ್ನು ಗೆಲ್ಲಬೇಕಾಗಿದ್ದರೆ ಮೃಗರಾಜನೆಂಬ ಸಿಂಹವು ಹೋಗಬೇಕೆ? ತಾವು ನನಗೆ ಅಪ್ಪಣೆಯನ್ನು ಕೊಡಿರಿ. ಆ ಬಣಗು ದೊರೆಯನ್ನು ನೆಲಕ್ಕೆ ಅಪ್ಪಳಿಸಿ, ತಾವು ಬಯಸಿರುವ ಕನ್ಯೆಯನ್ನು ಇಲ್ಲಿಯ ತನಕವೂ ಎಳೆದುಕೊಂಡೇ ತರುತ್ತೇನೆ. ಆ ಕುನ್ನಿ ಅರಸನನ್ನು ನಾನು ಗಣ್ಯಕ್ಕೆ ತರುವೆನೆ? ಮಣ್ಣು ಮುಕ್ಕಿಸಿ

ಬಿಡುತ್ತೇನೆ. ನನ್ನನ್ನು ಸಣ್ಣವನೆಂದು ತಿಳಿಯದೆ ಅಪ್ಪಣೆಯನ್ನು ಕೊಟ್ಟು ಕಳುಹಿಸಿರಿ. ಕಂಡಿತವಾಗಿಯೂ ಕನ್ಯೆಯನ್ನು ತಮಗೆ ತಂದುಕೊಡುತ್ತೇನೆ"

–ಎಂದು ಭದ್ರಸೇನನಿಂದ ಅಪ್ಪಣೆಯನ್ನು ಬೇಡಿದನು.

ಮಂತ್ರಿಪುತ್ರನ ವೀರವಾಕ್ಯಗಳನ್ನು ಕೇಳಿ ರಾಜನಿಗೆ ಅತ್ಯಾನಂದವಾಯಿತು.

ಅವನು ಯುದ್ಧದ ವೀಳೆಯವನ್ನು ಕೊಟ್ಟು ಚಿತ್ರಧ್ವಜನನ್ನು ಕಳುಹಿಸಿಬಿಟ್ಟನು.

ತರುಣ ಚಿತ್ರಧ್ವಜನು ವಿಶೇಷವಾದ ಉತ್ಸಾಹದಿಂದ ಯುದ್ಧಕ್ಕೆ ಹೊರಟನು. ಆದರೆ ಅದಕ್ಕಿಂತ ಮೊದಲು ತಾಯಿಯಿಂದ ಆಶೀರ್ವಾದ ಪಡೆದುಕೊಳ್ಳಬೇಕೆಂದು ಎಣಿಸಿ, ತಾಯಿಯನ್ನು ಕಂಡು–

"ಅಮ್ಮಾ, ಅಂಗದೇಶದ ರಾಜನಲ್ಲಿಗೆ ನಾನು ಯುದ್ಧಕ್ಕಾಗಿ ಹೋಗುತ್ತೇನೆ. ಸಂತೋಷದಿಂದ ನನಗೆ ಅಪ್ಪಣೆಯನ್ನು ಕೊಟ್ಟು ಕಳುಹಿಸು ತಾಯಿ!" ಎನ್ನುತ್ತ ವಂದಿಸಿದನು.

ಮಗನು ಅಕಸ್ಮಾತ್ತಾಗಿ ಯುದ್ಧಕ್ಕೆ ಅಣಿಯಾಗಿ ನಿಂತಿರುವುದನ್ನು ಕಂಡು ಆ ತಾಯಿಗೆ ಕಳವಳವಾಯಿತು. ಅವಳು ಮಗನ ಮೈದಡಹುತ್ತಾ–

"ಕಂದಾ, ನಿನ್ನ ಅಭಿಪ್ರಾಯ ಗೊತ್ತಾಯಿತು. ರಾಜರೊಡನೆ ಹೇಗೆ ಹೋರಾಡಬೇಕು ಎಂಬ ಯುದ್ಧದ ರೀತಿನೀತಿಗಳನ್ನು ತಿಳಿಯದೆ ನೀನು ವ್ಯರ್ಥವಾಗಿ ಹೊರಟಿರುತ್ತಿಯಲ್ಲಾ? ಹೀಗೆಲ್ಲ ಸುಮ್ಮಸುಮ್ಮನೆ ಮಕ್ಕಳಾಟಿಕೆ ಮಾಡಬಾರದು ಮಗನೆ! ಆನೆಗಳ ಸಮೂಹವನ್ನು ಗೆಲ್ಲುವೆನೆಂದು ಒಂದು ಸಿಂಹದ ಮರಿಯು ಹೊರಟರೆ ಹೇಗಾದೀತು ಹೇಳು? ಯುದ್ಧವೀರರನ್ನು ಗೆಲ್ಲುವುದು ನಿನ್ನಿಂದ ಸಾಧ್ಯವಾಗದು. ಆದುದರಿಂದ ನೀನು ಮನೆಯಲ್ಲಿ ಇದ್ದುಕೊಂಡು ಹಾಲು ಹಣ್ಣುಗಳನ್ನು ಸೇವಿಸುತ್ತ ಸಂತೋಷವಾಗಿರು. ಯುದ್ಧಕ್ಕೆ ಮನಸ್ಸುಮಾಡಬೇಡ"

–ಎಂದು ರಮಿಸಿ ಮಗನನ್ನು ಬಿಗಿದಪ್ಪಿ ಮುದ್ದಿಟ್ಟಳು.

ಆದರೆ ಆ ತರುಣನಿಗೆ ತಾಯಿಯ ಮಮತೆಯ ಮಾತುಗಳು ಹಿತವಾಗಲಿಲ್ಲ.

"ಅಮ್ಮಾ, ಕ್ಷತ್ರಿಯ ಕುಮಾರನಾದ ನಾನು ಯುದ್ಧಕ್ಕಾಗಿ ಹೊರಡು

ತ್ತಿರುವಾಗ, ವೀರಮಾತೆಯಾಗಿರುವ ನೀನು ಹೀಗೆ ತಡೆಯಬಹುದೆ?”

–ಎಂದು ಪ್ರಶ್ನಿಸಿದನು.

ಮತ್ತೆ ತನ್ನ ತಾಯಿಯ ಆಕ್ಕರೆಯ ಅಳುಮೊಗವನ್ನು ಕಂಡು ಅವನು ಅವಳಲ್ಲಿ ಧೈರ್ಯವನ್ನು ತುಂಬುವುದಕ್ಕೆ ಯತ್ನಿಸಿದನು.

“ಅಮ್ಮಾ, ನೀನೇನೂ ಚಿಂತಿಸಬೇಡ. ಸುಮ್ಮಸುಮ್ಮನೆ ಇಲ್ಲದ ಭಯವನ್ನು ಹಚ್ಚಿಕೊಳ್ಳಬೇಡ. ಒಂದೊಮ್ಮೆ ಬ್ರಹ್ಮನೇ ಬಂದು ನನ್ನೊಡನೆ ಯುದ್ಧಕ್ಕೆ ನಿಂತರೂ ಅವನ ಸೊಕ್ಕನ್ನು ನಿಲ್ಲಿಸಿಬಿಟ್ಟೇನು! ಉಳಿದ ದೇವತೆಗಳನ್ನಾದರೂ ಲೆಕ್ಕಿಸಲಾರೆನು. ಈ ರಾಜನು ನನಗೆ ಎಷ್ಟರವನು? ನಮ್ಮ ರಾಜರು ನಮ್ಮನ್ನು ಈ ತನಕ ಉಪ್ಪನ್ನವನ್ನು ಕೊಟ್ಟು ಸಾಕಿರುತ್ತಾರೆ. ಅವರ ಕಾರ್ಯಕ್ಕಾಗಿ ನಾವು ಒಪ್ಪದೆ ಇರುವುದು ನ್ಯಾಯವೆ? ಅದು ತಪ್ಪಲ್ಲವೆ? ರಾಜಾಜ್ಞೆಯನ್ನು ಮೀರುವುದರಿಂದ ಬರುವ ತೊಂದರೆಗಳನ್ನು ನೀನು ಎಣಿಸಿಕೊಳ್ಳಮ್ಮ! ನಾನೀಗ ಯುದ್ಧಕ್ಕೆ ಹೋಗಲೇಬೇಕಾಗಿದೆ. ಯುದ್ಧದಲ್ಲಿ ಹೇಗೆ ವರ್ತಿಸಬೇಕು, ಹೇಗೆ ಜಯವನ್ನು ಸಂಪಾದಿಸಬೇಕು– ಎಂಬ ಎಲ್ಲ ವಿಚಾರಗಳೂ ನನಗೆ ಮೊದಲೇ ತಿಳಿದಿವೆ. ಆದುದರಿಂದ ನೀನು ಮನಸ್ಸಿನಲ್ಲಿ ಬೇರೇನನ್ನೂ ಎಣಿಸದೆ ಧೈರ್ಯದಿಂದ ಸಂತೋಷವಾಗಿರು” ಎಂದನು.

ತಾಯಿಯು ಮನಸ್ಸಿಲ್ಲದ ಮನಸ್ಸಿನಿಂದ ಅನುಮತಿಯಿತ್ತಳು.

೩

ಚಿತ್ರಧ್ವಜನ ವೀರಕದನ.

ಚಿತ್ರಧ್ವಜನು ಉತ್ಸಾಹದಿಂದ ಯುದ್ಧಕ್ಕೆ ಹೊರಟನು.

ಆನೆ, ಕುದುರೆ, ತೇರು, ಕಾಲಾಳುಗಳೆಂಬ ನಾಲ್ಕು ವಿಧದ ಸೈನ್ಯಗಳೂ ಅವನ ಅಂಕೆಯಲ್ಲಿದ್ದವು.

ನಾಡುನಾಡುಗಳನ್ನು ಕಳೆದು ದೃಢವರ್ಮರಾಜನ ಅಂಗದೇಶಕ್ಕೆ ಮುತ್ತಿಗೆ ಹಾಕಿದನು.

ನಗರ ರಕ್ಷಕರು ಓಡೋಡುತ್ತಾ ಬಂದು ದೃಢವರ್ಮನೊಡನೆ,

"ದೊರೆಗಳೆ, ಯಾರೋ ಪರರಾಜರ ಸೈನ್ಯಗಳು ನಮ್ಮ ನಗರವನ್ನು ಮುತ್ತಿಗೆಹಾಕಿವೆ. ನಾವು ವಿಚಾರಿಸಲು ಹೋದರೆ ಬಡಿದಟ್ಟುತಿದ್ದಾರೆ. ನಮ್ಮ ರಾಜರನ್ನೇ ಕಳುಹಿಸಬೇಕೆಂದು ಹೇಳುತಿದ್ದಾರೆ"

–ಎಂಬುದಾಗಿ ಭೀತಿಯಿಂದ ದೂರಿಕೊಂಡರು.

ದೃಢವರ್ಮನಿಗೆ ಬಂದವರ ಕುರಿತಾಗಿ ಅಲ್ಪಭಾವನೆಯುಂಟಾಯಿತು. ಅವನು ಮಂತ್ರಿಯೊಡನೆ–

"ರಾಜರೆನಿಸಿದವರು ಇಂಥಾ ಕೆಟ್ಟ ಕೆಲಸವನ್ನು ಮಾಡಬಹುದೆ? ಕಳ್ಳರಂತೆ ಬಂದು ನಗರವನ್ನು ಮುತ್ತಿರುವರಂತೆ! ಅದರ ಮೇಲೆ ತಾವೇ ದೊಡ್ಡ ಸಾಹಸಿಗಳು ಎಂಬ ಹಮ್ಮು ಬೇರೆಯಿದೆಯಂತೆ! ಇವರು ಅಂಥಾ ಸಾಹಸಿಗಳಾಗಿದ್ದರೆ ಹೀಗೆ ಕಳ್ಳರಂತೆ ಮುತ್ತುತಿದ್ದರೆ? ಆದುದರಿಂದ ನಮ್ಮ ಸರ್ವ ಸೈನ್ಯವನ್ನೂ ನೀನು ಒಟ್ಟುಗೂಡಿಸು" ಎಂದನು.

ಮಂತ್ರಿಗೆ ದೃಢವರ್ಮನ ಅಭಿಪ್ರಾಯವು ಸರಿಯೆಂದು ತೋರಿತು.

ಯುದ್ಧ ಸನ್ನಾಹಗಳೆಲ್ಲ ಬೇಗಬೇಗನೆ ಜರಗಿದವು.

ರಾಜನು ತಾನೇ ಸೈನ್ಯವನ್ನು ನಡೆಸುತ್ತಾ ಬಂದು ವೈರಿಸೈನಿಕರನ್ನು ಹೊಡೆದು ಚದರಿಸಿದನು.

ಚಿತ್ರಧ್ವಜನು ತನ್ನ ಸೈನ್ಯವು ಚಲ್ಲಾಪಿಲ್ಲಿಯಾಗುತ್ತಿರುವುದನ್ನು ಕಂಡು. ಅವರನ್ನು ಧೈರ್ಯದ ಮಾತುಗಳಿಂದ ಹುರಿದುಂಬಿಸುತ್ತಾ ಮುಂದೆ ಮುಂದೆ ಬಂದನು.

ಅವನೇ ಆ ಬಂದಿರುವ ಸೈನ್ಯಗಳ ನಾಯಕನೆಂಬುದನ್ನು ತಿಳಿದು ದೃಢವರ್ಮನು,

ಎಲೋ, ಕ್ಷುದ್ರರಾಜಕುಮಾರ! ನೀನು ಯಾರು? ಹೀನರಾದ ಕಳ್ಳರ ಹಾಗೆ ಮುತ್ತಿರುವೆಯಲ್ಲಾ? ನಿನ್ನೊಡನೆ ಸೈನಿಕರು ಬೇರೆ ಇದ್ದಾರೆ. ಯಾವ ಕಾರಣಕ್ಕಾಗಿ ಬಂದಿರುವೆ ಹೇಳು. ಯಾವ ಕಾರಣವೇ ಇರಲಿ, ನೀನು ಕೇವಲ ಹುಡುಗನಾಗಿರುವೆ. ಒಳ್ಳೆಯ ಮಾತಿನಲ್ಲಿ ಹಿಂದಕ್ಕೆ ಹೋಗಿ ನಿನ್ನಪ್ಪನನ್ನು ಕಳುಹಿಸಿಕೊಡು. ವ್ಯರ್ಥವಾಗಿ ನಿನ್ನ ಜೀವಕ್ಕೆ ಅಪಾಯವನ್ನು ತಂದುಕೊಳ್ಳಬೇಡ."

-ಎಂದು ಸಾರಿಹೇಳಿದನು.

ಅವನ ಮಾತುಗಳನ್ನು ಚಿತ್ರಧ್ವಜನು ಅಣಕಿಸಿ ನಗುತ್ತಾ,

"ಹುಚ್ಚು ರಾಜನೆ, ಇತ್ತ ಕೇಳು. ನಾನೇಕೆ ಬಂದಿರುವೆನೆಂಬುದನ್ನು ಚೆನ್ನಾಗಿ ಕಿವಿಗೊಟ್ಟು ಕೇಳು. ನಿನ್ನ ಮಗಳನ್ನು ಇಲ್ಲಿಂದ ಒಯ್ದು ನನ್ನ ದೊರೆಯಾಗಿರುವ ಭದ್ರಸೇನ ಪ್ರಭುವಿಗೆ ಒಪ್ಪಿಸುವುದಕ್ಕಾಗಿ ಬಂದಿರುತ್ತೇನೆ. ಆದಕ್ಕಾಗಿಯೇ ನಿನ್ನ ನಗರಕ್ಕೆ ಮುತ್ತಿಗೆ ಹಾಕಿದುದು. ನೀನಾದರೋ ನನ್ನ ರಾಜರನ್ನು ಕಳುಹಿಸಬೇಕೆನ್ನುವೆ. ಅದೂ ಆಗಬಹುದು. ಆದರೆ ಮೊದಲು ನಿನ್ನ ಮಗಳನ್ನು ನಮ್ಮ ರಾಜರಿಗೆ ಒಪ್ಪಿಸಿ, ಮತ್ತೆ ಅವರನ್ನು ನಿನ್ನಲ್ಲಿಗೆ ಕಳುಹಿಸಿಕೊಡುತ್ತೇನೆ. ಏನೆನ್ನುವೆ?" ಎಂದನು.

"ಓಹೊ, ಬಹಳ ಚೆನ್ನಾಯಿತು, ಚೆನ್ನಾಯಿತು! ನಿನ್ನ ಮಾತುಗಳನ್ನು ಯಾರಾದರೂ ಮೆಚ್ಚಲೇಬೇಕು. ಹಿಂದಕ್ಕೆ ರಾವಣನೆಂದೊಬ್ಬನಿದ್ದನು- ಆ ಕಥೆ ಕೇಳಿರುವೆಯಾ ಹುಡುಗ? ಸೀತೆಯೆಂಬ ಅನ್ಯಸ್ತ್ರೀಯನ್ನು ಕಳ್ಳತನದಿಂದ ಅಪಹರಿಸಿಕೊಂಡುಹೋಗಿ ಕಡೆಗೆ ಸತ್ತೇಹೋದ! ಎಲೊ ಬಾಲಕ, ಇದು ನ್ಯಾಯವಲ್ಲ. ಅನ್ಯರ ಸತಿ, ಧನ ಮೊದಲಾದುವುಗಳನ್ನು ಬಯಸಿದವರಿಗೆ ಸತ್ತಲ್ಲಿಯೂ ಸುಖವಿಲ್ಲ ಕಾಣೊ! ಅಂಥವರು ನೇರವಾಗಿ ನರಕಕ್ಕೆ ಇಳಿಯುತ್ತಾರೆ."

“ರಾಜನೆ, ನಾವು ನಿನ್ನೊಡನೆ ಧರ್ಮದ ಕುರಿತು ಉಪದೇಶ ಪಡೆಯು ವುದಕ್ಕೆ ಬಂದವರೆಂದು ತಿಳಿದಿರುವೆಯೋ ಏನು? ಸುಮ್ಮನೆ ಏಕೆ ಒದರಿ ಕೊಂಡು ಗಂಟಲೊಣಗಿಸಿಕೊಳ್ಳುವೆ? ಕಟ್ಟಿಡು, ಕಟ್ಟಿಡು.”

“ಹುಡುಗಾ, ಮಹಾರೋಗಿಗೆ ಮದ್ದುಣಿಸಿದರೆ ಅದು ನಾಲಗೆಗೆ ಹಿತ ವಾಗುವುದಿಲ್ಲ. ನನ್ನ ಮಾತುಗಳಾದರೂ ನಿನಗೆ ಹೇಗೆ ಮೆಚ್ಚುಗೆಯಾದಾವು?”

“ರಾಜನೆ, ನಿನ್ನ ಬಡಿವಾರದ ಮಾತುಗಳಾವವೂ ಸದ್ಯ ಬೇಕಾಗಿಲ್ಲ. ಒಳ್ಳೆಯ ಮಾತಿನಿಂದ ನಿನ್ನ ಮಗಳನ್ನು ಬಿಟ್ಟುಕೊಡುತ್ತೀಯೋ ಅಥವಾ ಯುದ್ಧವನ್ನು ಆರಂಭಿಸುತ್ತೀಯೋ? ಹೇಳು.”

“ಚಿಕ್ಕ ಬಾಲಕನೆಂಬುದಾಗಿ ನಿನ್ನ ಮೇಲಿನ ಕರುಣೆಯಿಂದ ಮಾತಾಡಿ ದರೆ ನಿನಗೆ ಗರ್ವವು ತಲೆಗೇ ಅಡರಿಹೋಯಿತೆಂದು ಕಾಣುತ್ತದೆ. ಅರ್ಧ ನಿಮಿಷದಲ್ಲೇ ನಿನ್ನನ್ನು ಹೊಡೆದು ಯಮನೂರಿಗೆ ಕಳುಹಿಸುತ್ತೇನೆ ನೋಡು!”

“ನೀನು ಬಹು ಸಮರ್ಥನಾದ ರಾಜನೆಂಬುದು ನನಗೆ ಮೊದಲೇ ಗೊತ್ತು ಕಾಣೊ! ನಾನು ಹುಡುಗನಾದರೇನಾಯಿತು? ನಾನು ಹೊಡೆಯುವ ಬಾಣಕ್ಕೇನಾದರೂ ಹುಡುಗತನವುಂಟೇ ಎಂಬುದನ್ನು ಪರೀಕ್ಷಿಸಿಕೊಳ್ಳು.”

“ಸಾರಿ ಕೊಂದರೆ ಪಾಪವಿಲ್ಲ- ಎಂಬೊಂದು ಮಾತಿದೆ. ಆದುದರಿಂ ದಲೇ ಇಷ್ಟೆಲ್ಲ ನಿನಗೆ ಹೇಳಬೇಕಾಯಿತು. ನಿನಗೆ ಮಾತ್ರ ಸಲುಗೆ ಏರಿ ತೆಂದು ಕಾಣುತ್ತದೆ. ನೆತ್ತಿಗೇರಿದ ಅಹಂಕಾರವನ್ನು ಈಗ ಇಳಿಸಿಯೇ ಬಿಡುತ್ತೇನೆ”।

-ಎನ್ನುತ್ತ ರಾಜನು ಅಗ್ನಿಶರವನ್ನು ಚಿತ್ರಧ್ವಜನ ಮೇಲೆ ಬಿಟ್ಟನು.

ದೃಢವರ್ಮನ ಬಾಣವನ್ನು ಚಿತ್ರಧ್ವಜನು ಜಲಾಸ್ತ್ರದಿಂದ ಮುರಿದನು.

ರಾಜನು ಸರ್ಪಶರವನ್ನು ಎಸೆದನು.

ಅದು ಚಿತ್ರಧ್ವಜನ ಗರುಡಶರದಿಂದ ತುಂಡಾಗಿಹೋಯಿತು.

ಮತ್ತೆ, ರಾಜನ ಬಿಲ್ಲಿನಿಂದ ಪರ್ವತಾಸ್ತ್ರವು ಚಿಗಿಯಿತು.

ಬಾಲಕನ ವಜ್ರಾಯುಧವು ಅದನ್ನು ಹುಡಿಗುಟ್ಟಿತು.

ರಾಜನು ಸಹನೆತಪ್ಪಿ ವಿಶೇಷವಾದ ಕೋಪದಿಂದ ‘ಕತ್ತಲು ಕವಿಸುವ ಬಾಣ’ವನ್ನು ಹೂಡಿದನು.

ಹುಡುಗನು ಸೂರ್ಯಶರವನ್ನು ಜೋಡಿಸಿ, ಕವಿದಿದ್ದ ಕತ್ತಲನ್ನು ದೂಡಿದನು.

ದೊರೆಯ ಬತ್ತಳಿಕೆಯಲ್ಲಿದ್ದ ಬಾಣಗಳೆಲ್ಲ ಅಲ್ಲಿಗೆ ಮುಗಿಯಲು, ಅವನು ಹರಿತವಾದ ಖಡ್ಗವನ್ನು ಸೆಳೆದು ಜಳಪಿಸುತ್ತಾ ಮುಂದುವರಿದನು.

ಮಂತ್ರಿಸುತನ ಹೊಡೆತದಿಂದ ಆ ಖಡ್ಗವೂ ಇಕ್ಕಡಿಯಾಗಿ ಬಿತ್ತು!

ದೃಢವರ್ಮನಲ್ಲಿ ಕೊನೆಗುಳಿದುದೊಂದೇ ಗದಾಯುಧ. ತನ್ನ ಸರ್ವ ಶಕ್ತಿಯನ್ನೂ ಉಪಯೋಗಿಸಿ ಅದನ್ನು ಚಿತ್ರಧ್ವಜನ ಮೇಲೆ ಎಸೆದನು.

ಆದರೆ ಆ ಗದಾಯುಧವೂ ರಾಜನ ಹಿಂದಿನ ಆಯುಧಗಳ ಗತಿಯನ್ನೇ ಕಂಡಿತು!

ಹೀಗೆ ಯುದ್ಧರಂಗದಲ್ಲಿ ದೃಢವರ್ಮನು ಆಯುಧಹೀನನಾದನು.

ಅವನ ಸ್ಥಿತಿಯನ್ನು ಕಂಡು ಚಿತ್ರಧ್ವಜನು ರಾಜನನ್ನು ಸೆರೆಹಿಡಿದನು!

ತನಗೊದಗಿದ ಅಸಹಾಯಕ ಸ್ಥಿತಿಯನ್ನು ನೆನೆದು ರಾಜನು,

“ಶಿವಶಿವಾ, ಯುದ್ಧದಲ್ಲಿ ಇಂಥಾ ಸೋಲನ್ನು ಕಾಣುವಂತಾಯಿತಲ್ಲ! ಮಗಳನ್ನು ವತ್ಸರಾಜನಿಗೆ ಕೊಡುವೆನೆಂಬುದಾಗಿ ಆಡಿದ್ದ ಮಾತನ್ನು ಉಳಿಸುವುದಕ್ಕಾಗಿ ಈ ಸೋಲನ್ನು ಸಹಿಸಬೇಕಾಯಿತು. ನಾನು ಏಕಾಗಿ ಹಾಗೆ ನಿರ್ಧಾರ ಮಾಡಿದೆನೊ? ಈಗ ನನ್ನನ್ನು ಈ ಬಂಧನದಿಂದ ಬಿಡಿಸುವ ಧೀರರು ಯಾರಿದ್ದಾರೆ? ಹಿಂದೊಂದು ಯುದ್ಧದ ಸಂದರ್ಭದಲ್ಲಿ ನಾನು ವಿಂಧ್ಯಕೇತುವೆಂಬ ಬೇಡನನ್ನು ಉಳಿಸಿದ್ದೆ. ನನ್ನ ಮಿತ್ರನು ಅವನೆಂದು ಈ ವರೆಗೂ ತಿಳಿದಿದ್ದೆ. ಆದರೆ ಇಂಥಾ ಸಂದರ್ಭದಲ್ಲಿ ಅವನಾದರೂ ಬಂದಾನೆ? ನಮ್ಮಲ್ಲಿ ಅಷ್ಟಭಾಗ್ಯಗಳಿದ್ದರೆ ಮಾತ್ರ ಇಷ್ಟರೂ ಮಿತ್ರರೂ ಇದ್ದಾರೆ! ಕಷ್ಟ ಕಾಲವು ಬಂದಾಗ ಯಾರಿಗೆ ಯಾರಿದ್ದಾರೆ? ಶಿವನೆ, ನಿನ್ನನ್ನು ನಂಬಿದ ನನ್ನ ಮೇಲೆ ಕರುಣೆತೋರದೆ ಏಕೆ ಬಳಲಿಸುತ್ತಿರುವೆ?......”

–ಎಂಬುದಾಗಿ ಹಂಬಲಿಸಿ ಮರುಗಿದನು.

೪

ನಾಡರಾಯನಿಗೆ ಕಾಡರಾಯನ ಸಹಾಯ.

ವಿಂಧ್ಯಕೇತುವು ವಿಂಧ್ಯಾಪರ್ವತದ ತಪ್ಪಲುಪ್ರದೇಶದ ಗುಡ್ಡಗಾಡು ಜನರ ಅರಸನಾಗಿದ್ದನು. ತನ್ನ ಪ್ರಾಣಮಿತ್ರನಾಗಿರುವ ದೃಢವರ್ಮರಾಜನು ಕಷ್ಟಕ್ಕೆ ತುತ್ತಾಗಿರುವನೆಂಬುದನ್ನು ತಿಳಿದು ಅವನೂ ಪರಿತಪಿಸಿದನು. ಬೇಡರ ಒಡೆಯನಾಗಿದ್ದ ಅವನು ಪರಾಕ್ರಮಿಯೂ ಗುಣವಂತನೂ ಆಗಿದ್ದನೆಂಬುದು ನಿಜ.

'ಮಿತ್ರರ ಸಂಕಷ್ಟಕಾಲದಲ್ಲಿ ಸಹಾಯಮಾಡದವರು ಇದ್ದೇನು ಫಲ? ಫಲಗಳೇ ಇಲ್ಲದ ಮರದಂತೆ ನಿಷ್ಫಲ'— ಎಂದು ಎಣಿಸಿಕೊಂಡನು.

ಆದುದರಿಂದ ಮಿತ್ರಸಹಾಯಾರ್ಥವಾಗಿ ತಾನು ಆದಷ್ಟು ಬೇಗನೆ ಹೋಗಬೇಕೆಂಬುದಾಗಿ ನಿರ್ಧರಿಸಿದನು. ತನ್ನ ಅರಸಿಯನ್ನು ಕರೆದು—

"ನಾಗವೇಣಿಯೆ, ನನ್ನ ಮಿತ್ರನಾಗಿರುವ ಅಂಗದೇಶದ ದೃಢವರ್ಮರಾಜನು ತನ್ನ ವೈರಿಗಳೊಡನೆ ಯುದ್ಧದಲ್ಲಿ ಸೋತಿರುವನು. ಆದುದರಿಂದ ಅವನ ಸಹಾಯಕ್ಕಾಗಿ ನಾನೀಗಲೇ ತೆರಳುತ್ತೇನೆ. ಜಾಣೆ, ಆ ರಾಜನು ಹಿಂದೊಮ್ಮೆ ನನ್ನ ಪ್ರಾಣವನ್ನು ಉಳಿಸಿರುವ ಧೀರನಾಗಿರುತ್ತಾನೆ. ಅಂಥವನ ಸಹಾಯಕ್ಕೆ ಹೋಗದೆ ಹೇಗಿರಲಿ? ನನ್ನ ಮಿತ್ರನ ವೈರಿಗಳನ್ನು ಸದೆಬಡಿದು ಬರುತ್ತೇನೆ" ಎಂದನು.

ಅದಕ್ಕೆ ಅರಸಿಯು,

"ನಾಥ, ಆ ದೊರೆಯು ನಿಮಗೆ ಅದು ಹೇಗೆ ಮಿತ್ರರಾದರು ಎಂಬುದನ್ನು ನನಗೆ ತಿಳಿಸಲಾರಿರಾ? ತಿಳಿಸಿ ಮತ್ತೆ ಬೇಕಾದರೆ ಯುದ್ಧಕ್ಕೆ ಹೋಗಿರಿ" ಎಂದಳು.

"ಪ್ರಿಯೆ, ಆ ಕಥೆಯು ಬಲುದೊಡ್ಡದು; ಬಹಳ ಹಿಂದಿನ ಕಾಲದ್ದು. ಅದನ್ನೀಗ ವಿವರಿಸಿ ಹೇಳಿ ಸಮಯ ಕಳೆಯುವುದಕ್ಕೆ ನನಗೆ ಅವಕಾಶವಿಲ್ಲ. ಆದರೂ ಸಂಕ್ಷೇಪವಾಗಿ ಹೇಳುತ್ತೇನೆ ಕೇಳು—

"ಬಹಳ ಪೂರ್ವಕಾಲದಲ್ಲಿ ನಮ್ಮ ತಪ್ಪಲನ್ನು ಕ್ರೂರದಂಷ್ಟ್ರಕನೆಂಬ ಹೆಸರಿನ ರಾಕ್ಷಸನೊಬ್ಬನು ಮುತ್ತಿದ್ದನು. ಆ ಸುದ್ದಿಯನ್ನು ಕೇಳಿ ಇದೇ ವೃಢವರ್ಮರಾಜನು ತನ್ನ ಅಸಂಖ್ಯಾತ ಸೈನ್ಯದೊಡನೆ ಬಂದು, ಆ ರಕ್ಕಸ ನೊಡನೆ ಹೋರಾಡಿ ಅವನನ್ನು ಸಂಹರಿಸಿದ್ದನು. ರಕ್ಕಸನ ಸೈನಿಕರನ್ನೂ ಹೊಡೆದೋಡಿಸಿದ್ದನು. ಹೀಗೆ ನನ್ನ ಪ್ರಾಣವನ್ನು ಉಳಿಸಿದ್ದ ಮಿತ್ರನಿಗೆ ಸಕಾಲದಲ್ಲಿ ನಾನು ಸಹಾಯಕ್ಕೆ ಒದಗದಿದ್ದರೆ ಅವನು ನೊಂದುಕೊಳ್ಳಲಾರನೆ? ನೊಂದು ದೂರಲಾರನೆ?

"ಆದುದರಿಂದ ನನ್ನ ಬೇಡರ ಪಡೆಯನ್ನು ಕೂಡಿಕೊಂಡೇ ನಾನು ಯುದ್ಧಕ್ಕೆ ಹೋಗುತ್ತೇನೆ."

"ಸ್ವಾಮಿ, ನಿಮ್ಮ ಪ್ರಯಾಣವು ಸುಖಕರವಾಗಲಿ. ನೀವು ಹೋಗ ಬೇಕಾಗಿರುವುದು ನ್ಯಾಯವೂ ಧರ್ಮವೂ ಆಗಿರುವುದು. ಪ್ರಾಣವನ್ನು ರಕ್ಷಿಸಿದ ರಾಜರು ನಿಮಗೆ ತಂದೆಗೆ ಸಮಾನರಾಗಿರುವರು. ಆದರೊಂದು ಮಾತಿದೆ. ನಿಮ್ಮನ್ನು ಬಿಟ್ಟು ಒಂದು ಕ್ಷಣವೂ ನನ್ನಿಂದ ಇರಲಾಗುವುದಿಲ್ಲ. ಆದುದರಿಂದ ಯುದ್ಧಕಾರ್ಯವನ್ನು ಆದಷ್ಟು ಬೇಗನೆ ಮುಗಿಸಿ ಇತ್ತ ಬರಲೇ ಬೇಕು. ಇನ್ನೇನೂ ಹೇಳಲಾರೆ"

—ಎನ್ನುತ್ತ ತನ್ನ ಪತಿಗೆ ಗದೆ, ಖಡ್ಗ, ಶೂಲ, ಮುದ್ಗರ ಮೊದಲಾದ ಆಯುಧಗಳೆಲ್ಲವನ್ನು ಒದಗಿಸಿಕೊಟ್ಟಳು.

ಮತ್ತೆ ಆರತಿಯನ್ನು ಬೆಳಗಿ,

"ವೈರಿಗಳನ್ನು ಶೀಘ್ರವಾಗಿ ಜಯಿಸಿ ಬನ್ನಿರಿ" ಎಂದು ಶುಭಾಶಯವನ್ನು ಸೂಚಿಸಿದಳು.

ವಿಂಧ್ಯಕೇತುವು ರಥವೇರಿ ಸೈನ್ಯಸಮೇತನಾಗಿ ಮುನ್ನಡೆದನು.

ಅವನ ಸೈನಿಕರ ರಭಸಕ್ಕೆ ನೆಲದ ದೂಳೆದ್ದು ಸೂರ್ಯನನ್ನು ಮುಸುಕು ಮಾಡಿತು!

ಹೀಗೆ ವಿಂಧ್ಯಕೇತುವೂ ಆನೆ, ಕುದುರೆ, ತೇರು ಮತ್ತು ಕಾಲಾಳುಗ

ಳುಳ್ಳ ಸೈನಿಕರಿಂದ ಕೂಡಿಕೊಂಡು—

'ವೈರಿಗಳ ಸಮೂಹವನ್ನು ಹೊಡೆದು ಯಮಪುರಕ್ಕೆ ಅಟ್ಟುತ್ತೇನೆ'—ಎಂಬ ನಿರ್ಧಾರವನ್ನು ಮಾಡಿಕೊಂಡು—

ಅಂಗದೇಶಕ್ಕೆ ಅದಷ್ಟು ಹತ್ತಿರದ ದಾರಿ ಯಾವುದೆಂದು ಹುಡುಕಿ ನೋಡಿಕೊಂಡು—

ತನ್ನವರನ್ನು ಹುರಿದುಂಬಿಸುವ ವೀರೋಕ್ತಿಗಳನ್ನು ಆಡಿಕೊಂಡು ಮುಂದೊತ್ತಿದನು.

ಚಿತ್ರಧ್ವಜನು ದೃಢವರ್ಮನನ್ನು ಸೆರೆಯಿರಿಸಿದ್ದಲ್ಲಿಗೆ ಬಂದು ಮುಟ್ಟಿದನು.

ತನ್ನ ಮಿತ್ರನ ಆಗಮನವನ್ನು ಕಂಡ ದೃಢವರ್ಮನಿಗೆ ಹೊಸ ಜೀವ ಬಂದಂತೆ ಗೆಲುವಾಯಿತು. ಅವನು ಆದರದಿಂದ ಗೆಳೆಯನ ಮತ್ತವನ ಕುಟುಂಬದ ಯೋಗಕ್ಷೇಮವನ್ನು ವಿಚಾರಿಸಿದನು.

ಆದರೆ ಅದು ಕುಶಲವಾರ್ತೆಗಳನ್ನು ವಿಚಾರಿಸುತ್ತ, ವಿವರಿಸುತ್ತ ಕುಳ್ಳಿರುವ ಸಮಯವಾಗಿರಲಿಲ್ಲ. ಆದುದರಿಂದ ವಿಂಧ್ಯಕೇತುವು—

"ಮಹಾರಾಜನೆ, ನಾನೂ ನನ್ನವರೂ ಎಲ್ಲರೂ ನಿನ್ನ ಅನುಗ್ರಹದಿಂದ ಕ್ಷೇಮವಾಗಿಯೇ ಇದ್ದೇವೆ. ಆ ವಿಷಯವಂತಿರಲಿ. ಈಗ ನಿನ್ನನ್ನು ಸೆರೆಹಿಡಿದಿರುವ ದುಷ್ಟನು ಎಲ್ಲಿರುವನೆಂಬುದನ್ನು ನನಗೆ ಮೊದಲು ತೋರಿಸು" ಎಂದನು.

ಈ ಮಾತುಕತೆಯನ್ನು ತುಸುದೂರದಲ್ಲಿ ನಿಂತು ನೋಡುತಿದ್ದ ಚಿತ್ರಧ್ವಜನು ಆಗಲೆ ಮುಂದೆ ಬಂದು,

"ಎಲೊ, ಹೆಮ್ಮೆಯಿಂದ ಕುರುಡನಾಗಿರುವ ಬೇಡನೆ, ಇಂಥಾ ಬೂಟಾಟಿಕೆಯ ಮಾತುಗಳೇಕೆ? ನಿನ್ನ ಈ ರಾಜನನ್ನು ಯುದ್ಧದಲ್ಲಿ ಸೆರೆಹಿಡಿದಿರುವ ವೀರನು ನಾನೇ ಆಗಿರುತ್ತೇನೆ. ನೋಡು" ಎಂದನು.

"ಹುಡುಗಾ, ಬಾಯಿಮುಚ್ಚು. ಇಲ್ಲವಾದರೆ ನಿನ್ನ ಕಟವಾಯಿಯನ್ನೆ ಸಿಗಿಯುತ್ತೇನೆ ನೋಡು. ನಿನ್ನನ್ನು ಹೊಡೆದು ಕೆಡವಿ ಮೃತ್ಯುದೇವತೆಗೆ ಹಬ್ಬ ಮಾಡುತ್ತೇನೆ. ನನ್ನ ಮಿತ್ರನನ್ನು ಸೆರೆಬಿಡಿಸಿ ಸಂತೋಷಪಡಿಸುತ್ತೇನೆ. ನಿನ್ನ ವೀರತನಗಳನ್ನೆಲ್ಲ ನಿಲ್ಲಿಸಿ ಬಿಡುತ್ತೇನೆ"

—ಎಂದು ವಿಂಧ್ಯಕೇತುವು ಗರ್ಜಿಸಿದನು.

ಆದರೆ, ಚಿತ್ರಧ್ವಜನು ಒಂದಿಷ್ಟು ಅಳುಕದೆ, ಹಿಂಜರಿಯದೆ.

"ನಿನ್ನ ಮಿತ್ರನ ಸಹಾಯಕ್ಕೆಂದು ಸೈನ್ಯಕೂಡಿಕೊಂಡು ಬಂದುದರಿಂದ ನೀನೂ ಈ ರಾಜನಿಗೆ ಸಮಾನನಾದೆ. ಆದುದರಿಂದ ನಿನ್ನನ್ನೂ ನಿನ್ನ ಮಿತ್ರನ ಸ್ಥಾನಕ್ಕನೇ ಸೇರಿಸುತ್ತೇನೆ."

"ಸಾಕುಮಾಡೋ ಸಾಕುಮಾಡು. ಇಂಥಾ ಕೊಂಕು ಮಾತುಗಳಿಂದೇನೂ ಪ್ರಯೋಜನವಿಲ್ಲ. ನೀನೀಗ ಬಂದಂತೆ ಹಿಂದಕ್ಕೆ ನಿನ್ನ ದೇಶಕ್ಕೆ ಹೋಗಿ, ನಿನ್ನನ್ನು ಸಾಕಿಸಲಹಿದವರಿದ್ದರೆ ಅಂಥವರನ್ನು ಇಲ್ಲಿಗೆ ಕಳುಹಿಸಿಕೊಡು. ಸುಮ್ಮನೆ ಕೆಟ್ಟುಹೋಗಬೇಡ."

"ಚಿಕ್ಕ ನದಿಯೊಂದನ್ನು ದಾಟಲು ಅಸಾಧ್ಯನಾದವನಿಗೆ ಸಮುದ್ರವನ್ನು ದಾಟಲು ಸಾಧ್ಯವಾದೀತೆ? ಹೇಳು. ನೀನು ಮೊದಲು ನನ್ನನ್ನು ಗೆದ್ದುಕೊ; ಮತ್ತೆ ನನ್ನನ್ನು ಸಲಹಿದವರ ವಿಚಾರ ಮಾತಾಡು."

"ಮಾತಿನಲ್ಲಿ ನೀನು ಬಲುಜಾಣನಾಗಿರುವೆ ಎಂಬುದನ್ನು ಸಂಪೂರ್ಣವಾಗಿ ತಿಳಿದುಕೊಂಡಿದ್ದೇನೆ. ಎಲೋ ವೀರ, ನಿನ್ನನ್ನು ಹೊಡೆದಪ್ಪಳಿಸದಿದ್ದರೆ ನಾನು ಬೇಡನೇ ಅಲ್ಲವೆಂದು ತಿಳಿ, ಮತ್ತೆ ಈ ಜಗತ್ತಿಗೆ ನನ್ನ ಮುಖವನ್ನೇ ತೋರಿಸುವುದಿಲ್ಲವೆಂದು ಎಣಿಸಿಕೊ."

"ಓಹೊಹೊ! ಹೊಡೆದಪ್ಪಳಿಸುವ ವೀರ ನೀನು ಹೌದೆಂಬುದನ್ನು ನಾನೀಗ ತಾನೆ ತಿಳಿದುಕೊಂಡೆ!"

"ವ್ಯರ್ಥವಾದ ಪಂತದ ಮಾತುಗಳೇಕೆ? ಹುಡುಗನೆ, ನಿನ್ನ ಪ್ರಾಣವನ್ನು ಕಾಪಾಡತಕ್ಕ ವೀರರು ಇಲ್ಲಿ ಯಾರಿದ್ದಾರೆ ಎಂಬುದನ್ನು ಮೊದಲು ವಿಚಾರಿಸಿಕೊಳ್ಳು"

—ಎನ್ನುತ್ತ ವಿಂಧ್ಯಕೇತುವು ಬಾಣಗಳ ಸಮೂಹವನ್ನೆ ಬಿಟ್ಟುಬಿಟ್ಟನು.

ಆದರೆ ಚಿತ್ರಧ್ವಜನು ಆ ಎಲ್ಲ ಬಾಣಗಳನ್ನೂ ತುಂಡರಿಸಿದನು. ಆಗ,

"ಚಿಂತಿಲ್ಲ, ನೀನು ವೀರನೆಂಬುದು ನಿಜ, ನಿಜ!"

—ಎನ್ನುತ್ತ ಬೇಡನು ಮರಳಿ ನೂರು ಬಾಣಗಳನ್ನು ಎಸೆದು ಚಿತ್ರಧ್ವಜನ ಬಿಲ್ಲನ್ನೇ ಕಡಿದುಹಾಕಿದನು.

ಅದರೇನು? ಆ ತರುಣವೀರನ ಉತ್ಸಾಹವು ಕಡಿದುಹೋಗಲಿಲ್ಲ.

090132

ಅವನು ಬೇರೊಂದು ಬಿಲ್ಲನ್ನು ಕೊಂಡು ಯುದ್ಧಕ್ಕೆ ಎದುರಾದನು. ಬೇಡನಿಗೆ ಬಾಣಗಳನ್ನು ಗುರಿಹೂಡಿದನು.

ಅದರಿಂದಾಗಿ ಇನ್ನಷ್ಟು ಸಿಟ್ಟುಗೊಂಡ ಶಬರನು ಚಿತ್ರಧ್ವಜನ ಬಾಣಗಳೊಂದಿಗೆ ಅವನ ಹೊಸಬಿಲ್ಲನ್ನೂ ಮೂರು ತುಂಡಾಗುವಂತೆ ಮಾಡಿದನು.

“ದುಷ್ಟನಾದ ಬೇಡನೆ, ನನ್ನ ಧನುಸ್ಸು ತುಂಡಾದರೇನಾಯಿತು? ತೋಳಿನ ಶಕ್ತಿ ಕುಂದಿತೆಂಬುದಾಗಿ ಎಣಿಸಬೇಡ”

—ಎನ್ನುತ್ತ ಆ ಬಾಲಕನು ಗದೆಯೊಂದನ್ನು ತಿರುಗಿಸಿ ರಭಸದಿಂದ ಬೇಡನ ತಲೆಗೆ ಗುರಿಯಿಟ್ಟನು.

ಆದರೆ ವಿಂಧ್ಯಕೇತುವು ಅದನ್ನು ಮಿಂಚಿನ ವೇಗದಿಂದ ಸೆಳೆದುಕೊಂಡನು.

ಅದಾದ ಬಳಿಕ ಹೊಳೆಹೊಳೆಯುವ ಕಠಾರಿಯನ್ನು ಹಿಡಿದು ಚಿತ್ರಧ್ವಜನು ಮುಂಬರಲು, ಬೇಡನು ಅದನ್ನೂ ಕಸಿದುಕೊಂಡನು.

ಅಲ್ಲಿಗೆ ಆ ಹುಡುಗನ ಕೈ ಸೋತುಹೋಯಿತು.

ಅವನು ಸೋತನೆಂಬುದನ್ನು ತಿಳಿದು ಬೇಡನು,

“ಹುಚ್ಚು ಹುಡುಗ, ಯುದ್ಧದ ನಿಜವಾದ ಮರ್ಮವನ್ನು ತಿಳಿಯದೆ, ಸಿಂಹದ ತುತ್ತಿಗೆ ಸಿಕ್ಕಿಬೀಳುವ ಕುರಿಯಂತೆ, ನನ್ನೊಡನೆ ಹೋರಾಡಲೆಂದು ಬಂದೆ. ಈಗ ನಿನ್ನ ಕೊರಳನ್ನು ರಕ್ಷಿಸುವವರು ಯಾರಿದ್ದಾರೆ?”

—ಎಂದು ಅವನನ್ನು ತರಿಯಲು ಕತ್ತಿಯನ್ನು ಸೆಳೆದನು.

ಅವನ ಅಭಿಪ್ರಾಯವನ್ನು ತಿಳಿದ ದೃಢವರ್ಮ ರಾಜನು,

“ಮಿತ್ರಾ, ತಡೆ ತಡೆ! ಮುಂದುವರಿಯಬೇಡ. ನನ್ನ ಮಾತನ್ನೊಂದಿಷ್ಟು ಮೊದಲು ಕೇಳು. ಈ ಹುಡುಗನು ಯುದ್ಧದಲ್ಲಿ ಕೈಸೋತಿರುವನೆಂಬುದು ನಿಜ. ಆಯುಧಗಳೆಲ್ಲವೂ ಕಳೆದುಹೋಗಿ, ಅಸಹಾಯಕನಾಗಿ ದಣಿದು ಸೋತಿರುವ ಕ್ಷತ್ರಿಯ ಪುತ್ರನನ್ನು ವಧಿಸುವುದು ಧರ್ಮವಲ್ಲ. ಹಾಗೆ ಮಾಡಿದರೆ ಎಂದೆಂದಿಗೂ ಅಳಿಯದ ಅಪಕೀರ್ತಿಯು ನಮಗೆ ತಟ್ಟುವುದು. ಜಯಲಕ್ಷ್ಮಿಯೂ ನಮ್ಮನ್ನು ತೊರೆದು ಹೋದಾಳು! ಆದುದರಿಂದ ನೀನೀತನನ್ನು ಸೆರೆಹಿಡಿಯುವುದು ಯೋಗ್ಯವಾದುದು. ಆಗ ಈ ವಾರ್ತೆಯನ್ನು ಕೇಳಿ ಇವನನ್ನು ಯುದ್ಧಕ್ಕೆ ಕಳುಹಿಸಿದ ರಾಜರು ನಮ್ಮೊಡನೆ ಯುದ್ಧಕ್ಕೆ ಬರುವರು.

ಅವರೊಡನೆ ನಿನ್ನ ಶೌರ್ಯವನ್ನು ತೋರಿಸಿ ಸಂಹರಿಸು. ಆದರೆ ಈ ಬಾಲಕನನ್ನು ಮಾತ್ರ ಕೊಲ್ಲಬೇಡ”

—ಎಂದು ಯುದ್ಧಧರ್ಮಕ್ಕೆ ಸರಿಯಾಗಿ ಹೇಳಿ ಸಂತೈಸಿದನು.

ರಾಜನ ಅಪೇಕ್ಷೆಯಂತೆ ವಿಂಧ್ಯಕೇತುವು ಅವನನ್ನು ಸೆರೆಹಿಡಿದು ಬಂಧನದಲ್ಲಿರಿಸಿ ಬಲವಾದ ಕಾವಲನ್ನಿಟ್ಟನು.

ಚಿತ್ರಧ್ವಜನ ಸೈನ್ಯವೆಲ್ಲ ಭಯದಿಂದ ಚೆದರಿಹೋಯಿತು.

೫

ದಿಂಡೀರವನದಲ್ಲಿ ಬೆಳಗಾಯಿತು!

ಅತ್ತ ಕಳಿಂಗದೇಶದಲ್ಲಿ ಭದ್ರಸೇನನು ಚಿತ್ರಧ್ವಜನ ಕುರಿತಾಗಿಯೇ ಯೋಚಿಸುತ್ತಾ, ಯುದ್ಧವಾರ್ತೆಯನ್ನು ನಿರೀಕ್ಷಿಸಿಕೊಂಡಿದ್ದನು.

ಹೀಗಿರಲು ಅಂಗದೇಶದಿಂದ ಕಂಗೆಟ್ಟು ಓಡಿದ್ದ ದೂತರು ಭಯದಿಂದ ತತ್ತರಿಸುತ್ತಾ ಹೇಳತೊಡಗಿದ ಸುದ್ದಿಯನ್ನು ಕಿವಿಗೊಟ್ಟು ಕೇಳಿದನು.

"ಭದ್ರಸೇನ ಮಹಾಪ್ರಭುಗಳೇ, ಚಿತ್ರಧ್ವಜನ ಯುದ್ಧವು ಬಹು ಭೀಕರವಾಗಿತ್ತು. ಅನೇಕ ವೀರರನ್ನು ಕೆಡಹಿ, ಆನೆ ಕುದುರೆಗಳ ದಳಗಳನ್ನು ನುಚ್ಚುನುರಿ ಮಾಡಿ, ಜಯಶಾಲಿಯಾಗಿ ಇಂದ್ರಸುತನಾದ ಜಯಂತನಂತೆ ಮೆರೆಯುತ್ತಿದ್ದನು. ಅಷ್ಟರಲ್ಲಿ ರಾಜನಾಗಿದ್ದ ದೃಢವರ್ಮನೇ ಯುದ್ಧಕ್ಕೆ ಬಂದನು. ಆದರೂ ಚಿತ್ರಧ್ವಜನು ಲೆಕ್ಕಿಸದೆ ಹೋರಾಡಿ ಆ ರಾಜನನ್ನೇ ಸೆರೆಹಿಡಿದನು. ಕೊನೆಗೊಬ್ಬ ಶಬರನು ಆ ರಾಜನ ಸಹಾಯಕ್ಕೆ ಬಂದು ಕಾದುತ್ತಾ ನಮ್ಮ ಚಿತ್ರಧ್ವಜನನ್ನು ಸೆರೆಹಿಡಿದು ರಾಜನ ಸೆರೆಬಿಡಿಸಿದನು"

—ಎಂಬುದಾಗಿ ದೂತರು ವಿವರಿಸಿದರು.

ಅವರ ಮಾತುಗಳನ್ನು ಕೇಳಿದೊಡನೆ ಭದ್ರಸೇನನು ಜಗತ್ತಿನ ಅಂತ್ಯಕಾಲದ ರುದ್ರನಂತೆ ಕೆಂಡನಾದನು. ಅವನ ಕಣ್ಣುಗಳಿಂದ ಕಿಡಿಗಳು ಸಿಡಿಯುವಂತೆ ಕಂಡಿತು.

"ಮಂತ್ರಿ, ನಮ್ಮ ಬಾಲಕನನ್ನು ಆ ಮೂರ್ಖ ರಾಜನು ಸೆರೆಯಲ್ಲಿಟ್ಟಿರುವನಂತೆ! ಇನ್ನು ಸುಮ್ಮನಿರಲು ಸಾಧ್ಯವೇ ಇಲ್ಲ. ನಮ್ಮ ಬಲಗಳೆಲ್ಲ ಕೂಡಲೆ ಹೊರಡಲಿ"

—ಎಂದು ಆರ್ಭಟಿಸಿ ಅಪ್ಪಣೆಯಿತ್ತನು,

ಯೋಗ್ಯವಾದ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿ ಭದ್ರಸೇನನು ಹೊರಟನು.

ಪರ್ವಕಾಲದಲ್ಲಿ ಅಲ್ಲೋಲ ಕಲ್ಲೋಲವಾಗುವ ಮಹಾಸಾಗರದಂತೆ ಸೈನ್ಯವು ಘೋಷವೆಬ್ಬಿಸುತ್ತಾ ಮುಂದುವರಿಯಿತು. ಆಕಾಶಮಂಡಲವೇ ಧೂಳಿನಿಂದ ಕೆಂಪೇರಿತು.

ಭದ್ರಸೇನನು ಅನೇಕ ಪರ್ವತಗಳನ್ನೂ ಹೊಳೆಗಳನ್ನೂ ಕಳೆದು ಮುಂದೆಮುಂದೆ ಬಹುರಭಸದಿಂದ ಬರುತ್ತಾ ಅಂಗರಾಜ್ಯದ ಒಳನುಗ್ಗಿ ಕೋಟೆಕೋಟೆಗಳನ್ನೊಡೆದು ದಾಳಿಯಿಟ್ಟನು.

ದೃಢವರ್ಮನು ತಾನೂ ಬಂದಿರುವ ವೈರಿರಾಜನೊಡನೆ ಕಾದುವುದಕ್ಕಾಗಿ ಸೈನ್ಯಗಳನ್ನು ಒಟ್ಟುಕೂಡಿಸಿ ಭದ್ರಸೇನನೊಡನೆ ಮಾರಾಂತನು.

“ಯಾವ ರಾಜಕುಮಾರನು ನೀನು? ನಮ್ಮ ನಗರವನ್ನೇಕೆ ಮುತ್ತಿರುವೆ? ನಮ್ಮ ಸೈನಿಕರನ್ನೇಕೆ ಹೊಡೆವೆ? ನಿನ್ನ ತಂದೆತಾಯಿಗಳಾರು? ನಿನ್ನ ದೇಶಕ್ಕೆ ರಾಜನಾರು? ಇಲ್ಲಿಗೆ ಬಂದಿರುವ ಕಾರಣವೇನು? ಬೇಗನೆ ಹೇಳು. ನಾನೇ ಈ ಅಂಗರಾಜದ ಅರಸು. ದೃಢವರ್ಮನೆಂದು ನನ್ನ ಹೆಸರು.”

“ರಾಜನೆ, ನಿನ್ನಂತೆ ನಾನೂ ಒಬ್ಬ ರಾಜನಿದ್ದೇನೆ. ಕಳಿಂಗವೇ ನನ್ನ ರಾಜ್ಯ. ಭದ್ರಸೇನನೆಂದರೆ ನಾನೇ. ನನ್ನ ವೀರತನದ ವಿಚಾರವನ್ನು ನೀನೂ ಕೇಳಿ ತಿಳಿದಿರಬಹುದು. ನಿನ್ನ ಮಗಳನ್ನು ಇಲ್ಲಿಂದ ಕೊಂಡೊಯ್ದು ಲಗ್ನವಾಗುವುದಕ್ಕಾಗಿ ನಾನಿಲ್ಲಿಗೆ ಬಂದಿರುತ್ತೇನೆ. ಈ ವಿಚಾರವನ್ನು ಮರೆತವನಂತೆ ಸುಮ್ಮನೆ ಏಕೆ ವಿಚಾರಿಸುತ್ತಿರುವೆ?”

“ಸಾಕು ನಿನ್ನ ಹೆಗ್ಗಳಿಕೆ! ನಿನ್ನಂತೆಯೆ ಹಿಂದೊಬ್ಬ ಹುಡುಗನು ಬಂದಿದ್ದ. ಇಂದವನು ನಮ್ಮ ಸೆರೆಯಲ್ಲಿದ್ದಾನೆ. ಅವನಂತೆ ನೀನೂ ವೃಥಾ ನಾಶವಾಗಬೇಡ. ಹಿಂದೆ ಹೋಗು.”

“ರಾಜನೇ ನಿನಗೆ ಭ್ರಾಂತು ಹಿಡಿದಿದೆ! ಒಂದೊಮ್ಮೆ ಶಿವನೇ ಬಂದು ಎದುರಾದರೂ ನಾನು ಲೆಕ್ಕಿಸುವವನಲ್ಲ. ನಿನ್ನ ಬಡಿವಾರಗಳನ್ನಿಲ್ಲಿ ಕಟ್ಟಿಡು. ನಿನ್ನನ್ನು ಹೊಡೆದು ಕೆಡಹಿ ಪಿಶಾಚಿಗಳಿಗೆ ಔತಣ ಬಡಿಸುತ್ತೇನೆ ನೋಡು”

ಎನ್ನುತ್ತ ಭದ್ರಸೇನನು ಬಾಣಗಳ ಸುರಿಮಳೆಗರೆದನು.

ದೃಢವರ್ಮನು ಆ ಬಾಣಗಳನ್ನು ಖಂಡಿಸಿ ಮರುಬಾಣಗಳನ್ನೆಸೆದನು.

ಭದ್ರಸೇನನು ಒಡನೆಯೇ ಪರ್ವತಶರವನ್ನು ಹೂಡಲು, ಅದರ ಹೊಡೆತಕ್ಕೆ ದೃಢವರ್ಮನು ಮೂರ್ಛಿತನಾದನು.

ಕೂಡಲೇ ವಿಂಧ್ಯಕೇತುವು ಕಿಡಿಯುಗುಳುತ್ತ ಭದ್ರಸೇನನನ್ನು ತಡೆದು,

"ಎಲೊ, ನೀಚನಾದ ಮನುಷ್ಯನೆ! ಎಲ್ಲಿಗೆ ಹೋಗುವೆ? ನಿಲ್ಲು. ನಮ್ಮ ರಾಜನನ್ನು ಗೆದ್ದ ಗರ್ವವನ್ನು ಈಗಲೇ ಇಳಿಸಿಬಿಡುತ್ತೇನೆ"

—ಎನ್ನುತ್ತ ಬಾಣಗಳನ್ನು ಹೊಡೆದನು.

ಭದ್ರಸೇನನು ಅವುಗಳನ್ನು ತುಂಡರಿಸಿ ಕೋಪದಿಂದ,

"ಬಡ ಬೇಡನೇ, ನಿನ್ನ ಮಿತ್ರನು ಬಿದ್ದಲ್ಲಿಗೆ ನಿನ್ನನ್ನೂ ಕೆಡೆಯುತ್ತೇನೆ" ಎಂದನು.

"ಬಾಯಿಂದ ಮಾತಾಡಿ ಪ್ರಯೋಜನವೇನು? ಯುದ್ಧಕ್ಕೆ ಸಿದ್ಧನಾಗು."

ಅವರಿಬ್ಬರೊಳಗೆ ಬಹುಭಯಂಕರವಾದ ಯುದ್ಧವಾಯಿತು. ಆದರೆ ವಿಂಧ್ಯಕೇತುವಿನ ರಥವು ಪುಡಿಯಾಯಿತು. ಸಾರಥಿ ಮಡಿದನು. ಕೊನೆಗೆ ಅವನೂ ಬಿದ್ದು ಪ್ರಾಣಬಿಟ್ಟನು!

ಅಷ್ಟರಲ್ಲಿ ಮೂರ್ಛೆತಿಳಿದೆದ್ದ ದೃಢವರ್ಮನು ಮರಳಿ ಯುದ್ಧಕ್ಕಾಗಿ ಬರುವಾಗ ಮಡಿದು ಬಿದ್ದ ವಿಂಧ್ಯಕೇತುವನ್ನು ಕಂಡನು!

ತನ್ನ ಮಿತ್ರನ ಅಳಿವಿಗಾಗಿ ರಾಜನು ಬಹಳವಾಗಿ ಮರುಗಿದನು—

"ಅಯ್ಯೊ ಮಿತ್ರ! ನನಗಾಗಿ ಬಂದು ಪ್ರಾಣವನ್ನು ಅರ್ಪಿಸಿದೆಯಲ್ಲ! ನನ್ನಂತಹ ಪಾಪಿ ಬೇರಾರಿರುವರು? ನಾನು ಏಕಾಗಿ ನಿನ್ನನ್ನು ಕರೆದೆನೋ! ಏಕಾಗಿ ನಿನಗೀ ದುರ್ಗತಿಯೊದಗಿತೋ!"

ಭದ್ರಸೇನನು ಅವನನ್ನು ಮೂದಲಿಸುತ್ತ,

"ಹುಚ್ಚು ರಾಜನೆ, ಈ ಹೆಣದ ಮೇಲೆ ಬಿದ್ದುಕೊಂಡು ಗೋಳಾಡಿದರೆ ಉಪಯೋಗವೇನು? ನಿನ್ನ ಬಿಲ್ಬಾಣಗಳನ್ನು ಯಾವ ಕೊಂಪೆಗೆ ಬಿಸಾಡಿದೆ?" ಎಂದನು.

ಆ ಮಾತಿನಿಂದಾಗಿ ಉರಿದೆದ್ದ ದೃಢವರ್ಮನು ಮತ್ತೊಮ್ಮೆ ಯುದ್ಧಕ್ಕೆ ಸಿದ್ಧನಾದನು. ಪುನಃ ಅವರಿಬ್ಬರೊಳಗೆ ಕಾದಾಟ ನಡೆದು ದೃಢವರ್ಮನು ಇನ್ನೊಮ್ಮೆ ಮೂರ್ಛೆಗೊಂಡುಬಿದ್ದನು.

ಭದ್ರಸೇನನು ತನಗೆ ಜಯವಾದ ಸಂತೋಷದಿಂದ ಮೈಮರೆಯದೆ ಕೂಡಲೆ ಚಿತ್ರಧ್ವಜನನ್ನು ಸೆರೆಯಿಂದ ಬಿಡಿಸಿದನು. ಆದರೆ ಆ ಬಾಲಕನು ಸೋಲಿನ ನಾಚಿಕೆಯಿಂದ ತಲೆತಗ್ಗಿಸಿ ನಿಂತುದನ್ನು ಕಂಡು,

"ಕಂದಾ, ಯುದ್ಧದಲ್ಲಿ ನನಗಾಗಿ ತುಂಬಾ ಕಷ್ಟಪಟ್ಟೆಯಲ್ಲ! ಬಂಧನದಲ್ಲಿ ನಿನ್ನನ್ನು ಎಷ್ಟೊಂದು ಬಳಲಿಸಿದರೋ! ಆಗಿಹೋದುದಕ್ಕಾಗಿ ಇನ್ನು ಅತ್ತು ಫಲವಿಲ್ಲ. ಮರುಗಬೇಡ, ಇತ್ತನೋಡು. ನಿನ್ನನ್ನು ಸೆರೆಹಿಡಿದಿದ್ದ ದುರುಳ ನನ್ನು ನಾನು ಈ ಲೋಕದಲ್ಲಿ ಉಳಿಸಲಿಲ್ಲ"

—ಎಂಬುದಾಗಿ ಮಮತೆಯಿಂದ ಉಪಚರಿಸಿದನು. ಬಳಿಕ,

"ಮಗೂ, ನೀನೀಗ ಸೈನ್ಯಗಳನ್ನೆಲ್ಲ ಕರೆದುಕೊಂಡು ನಮ್ಮ ನಗರಕ್ಕೆ ಹೋಗು. ನಾನು ಅಷ್ಟರೊಳಗೆ ಕನ್ಯೆಯನ್ನೂ ಕರೆದುಕೊಂಡು ಬರುತ್ತೇನೆ"

ಎಂದು ಒಡಂಬಡಿಸಿ ಕಳುಹಿಸಿದನು.

§ § § § § § §

ಭದ್ರಸೇನನು ರಾಜಾಲಯವನ್ನು ಪ್ರವೇಶಿಸಿದನು. ಆಗ ರಾತ್ರಿ ಯಾಗಿತ್ತು.

ದೃಢವರ್ಮನ ಸಭಾಸ್ಥಾನದ ವೈಭವವನ್ನು ಕಂಡನು. ಸೂರ್ಯ ಪ್ರಕಾಶದಂತೆ ಕಂಗೊಳಿಸುವ ಒಂಬತ್ತು ಬಗೆಯ ರತ್ನಗಳಿಂದ ಹೊಳೆಯುವ ಸಿಂಹಾಸನವನ್ನು ನೋಡಿ ತೃಪ್ತಿಯಿಂದ ನಕ್ಕನು. ಅಲ್ಲಿಯ ಸಂಪತ್ತನ್ನು ಗ್ರಹಿಸಿ ಅವನಿಗೆ ಆಶ್ಚರ್ಯವೂ ಆಗದಿರಲಿಲ್ಲ. ಅವನ್ನೆಲ್ಲ ಬಿಟ್ಟು ರತ್ನಾವತಿ ಯನ್ನು ಅರಸುತ್ತಾ ಪಚ್ಚೆರತ್ನಗಳಿಂದ ಶೋಭಿಸುವ ನಡುಬಾಗಿಲನ್ನು ತೆರೆದು ಒಳಹೊಕ್ಕನು.

ಉಪ್ಪರಿಗೆಗೆ ಏರಿ ನೋಡುವುದೇನು?

ರತ್ನಾವತಿಯು ಬಂಗಾರದ ಮಂಚದ ಮೇಲೆ ಮಲಗಿ ನಿದ್ರಿಸಿದ್ದಳು. ರಾಜನ ಮನಸ್ಸು ಕದಡಿಹೋಯಿತು. ಆ ಕನ್ಯೆಯ ಸೊಬಗು ಅಷ್ಟು ಹಿರಿದಾಗಿತ್ತು. ಆಕಾಶದ ಚಂದ್ರನು ಕೆಳಗಿಳಿದು ಬಂದು ವಿರಾಜಿಸುತ್ತಿರುವನೋ ಎಂಬಂತೆ ಅವಳ ಹಣೆಯು ಪ್ರಕಾಶಿಸುತ್ತಿತ್ತು. ತನ್ನ ಹಗೆಯಾಗಿರುವ

ಚಂದ್ರನ ಸಾಮೀಪ್ಯದಿಂದಾಗಿ ಬಾಡಿರುವ ತಾವರೆಗಳಂತೆ ಅವಳ ಕಣ್ಣುಗಳು ನಿದ್ರೆಯಲ್ಲಿ ಮುಚ್ಚಿದ್ದವು; ಮುಚ್ಚಿ ಆ ಚಂದ್ರನನ್ನು ಹೀನಯಿಸುತಿದ್ದವು....

ಅಂಥಾ ರತ್ನಾವತಿಯನ್ನು ಕಂಡು ಭದ್ರಸೇನನು,

"ಅಮಮ! ಈ ಕನ್ಯೆಯು ಎಷ್ಟೊಂದು ಸುಂದರಿಯಾಗಿರುವಳು! ಲೋಕದ ಸ್ತ್ರೀಯರೆಂಬ ಉದ್ಯಾನದಲ್ಲಿ ಇಂಥಾ ಹೊಸ ಬಳ್ಳಿಯು ಬೇರೆಲ್ಲಿಯೂ ಇರಲಾರದು!... ಬ್ರಹ್ಮನು ತನ್ನ ಜಾಣ್ಮೆಯನ್ನೆಲ್ಲ ಉಪಯೋಗಿಸಿ ಈಕೆಯನ್ನು ರಚಿಸಿರಬೇಕು. ರತಿಯಂತೆ ರೂಪವಿರುವ ಇಂಥಾ ಚೆಲುವೆಯನ್ನು ನಾನು ವರಿಸಿದೆನೆಂದರೆ ಲೋಕದಲ್ಲಿ ನನ್ನಷ್ಟು ಭಾಗ್ಯಶಾಲಿಗಳು ಬೇರೆ ಯಾರು?" ಎಂದು ಎಣಿಸಿಕೊಂಡನು.

ಮತ್ತೆ ತಡಮಾಡದೆ, ಅವಳು ಮಲಗಿದ್ದ ಮಂಚವನ್ನೇ ಎತ್ತಿ ಹೊತ್ತು ಕೊಂಡು ತನ್ನ ನಗರದತ್ತ ನಡೆದನು. ಹೀಗೆ ಇಡಿಯ ರಾತ್ರಿಯನ್ನು ಅವನು ಪ್ರಯಾಣದಲ್ಲಿಯೇ ಕಳೆದ ಮೇಲೆ ಸೂರ್ಯನು ಉದಯಿಸುತ್ತಿರುವ ಹೊತ್ತಿಗೆ ದಿಂಡೀರವೆಂಬ ದೊಡ್ಡದೊಂದು ಕಾಡನ್ನು ಸೇರಿದ್ದನು. ಅಲ್ಲಿ ತನ್ನ ಹೊರೆಯನ್ನಿಳಿಸಿ, ಆಯಾಸವನ್ನು ಪರಿಹರಿಸುವುದಕ್ಕಾಗಿ ತುಸು ದೂರದಲ್ಲಿ ವಿಶ್ರಮಿಸಿದ್ದನು.

ಅಷ್ಟರಲ್ಲಿ ರತ್ನಾವತಿಯು ಎಚ್ಚೆತ್ತಳು!

ತನ್ನ ಸುತ್ತು ಮುತ್ತಣ ಪರಿಸರವನ್ನು ಕಂಡು ಭಯಗೊಂಡಳು. ನಡೆದ ಅದ್ಭುತವು ಏನೆಂಬುದನ್ನು ತಿಳಿಯದೆ ಬಾಯ್ದೊಟ್ಟು ಅತ್ತಳು!

ಅವಳು ಮಲಗಿದುದು ಅರಮನೆಯ ಉಪ್ಪರಿಗೆಯಲ್ಲಿ. ಎಚ್ಚರವಾಗುವಾಗ ವನದ ಮಧ್ಯದಲ್ಲಿ ಇದ್ದಳು. ಕಳ್ಳರು ಹೊತ್ತುಕೊಂಡು ಬಂದರೋ? ಭೂತಪಿಶಾಚಿಗಳ ಮಾಯೆಯೋ? ಒಂದೂ ಅವಳಿಗೆ ಗೊತ್ತಾಗಲಿಲ್ಲ. ಆದುದರಿಂದ ದೇವರನ್ನು ಮೊರೆಯಿಟ್ಟಳು.

ಅಲ್ಲೇ ಕುಳಿತಿದ್ದ ರಾಜನನ್ನು ತುಸುಹೊತ್ತಿನ ಮೇಲೆ ಕಂಡು ರತ್ನಾವತಿಯು ದೀನಳಾಗಿ ಅವನೊಡನೆ,

"ಮಹನೀಯ, ನನ್ನ ಮೇಲೆ ಕರುಣೆತೋರು! ನೀನು ಯಾರೆಂದು ದಯವಿಟ್ಟು ಹೇಳು. ತಂದೆಯೆ, ನನ್ನನ್ನು ಏಕಾಗಿ ಇಲ್ಲಿಗೆ ತಂದಿರುವೆ?

ನನ್ನ ಪ್ರಾಣವನ್ನು ತೆಗೆಯಬೇಕೆಂದು ಎಣಿಸಿರುವೆಯಾ? ಬಾಲಕಿಯಾಗಿರುವ ನನ್ನೊಡನೆ ಚಿನ್ನಾಭರಣಗಳೇನೂ ಇಲ್ಲವಣ್ಣಾ! ಸುಮ್ಮನೆ ನನ್ನನ್ನು ಕರಗಿಸದೆ ನೀನು ಯಾರೆಂಬುದನ್ನು ಹೇಳಲಾರೆಯ!"

—ಎಂದು ಪ್ರಾರ್ಥಿಸಿಕೊಂಡು ಹಲುಬಿದಳು. ಆದರೆ ರಾಜನು ಮಾತಾಡಲಿಲ್ಲ.

"ಸ್ತ್ರೀಯೊಬ್ಬಳು ತನ್ನ ಸರದ ಪದಕವನ್ನು ಕಿತ್ತು ದಂಡೆಯ ಮೇಲಿರಿಸಿ ದೊಡನೆ ಅದನ್ನು ಮಾಂಸದ ತುಂಡೆಂದು ತಿಳಿದು ಗಿಡುಗಗಳು ಒಯ್ಯುವಂತೆ ನನ್ನ ಸ್ಥಿತಿಯಾಯಿತೆ! ತಾವರೆಯನ್ನು ಕೊಳದಿಂದ ಕಿತ್ತು ಶಿಲೆಯ ಮೇಲೆ ಎಸೆದಂತೆ ನನ್ನ ದುರದೃಷ್ಟವು ನನ್ನನ್ನು ಈ ಕಾಡಿನ ನಡುವಿಗೆ ಎಸೆದುಬಿಟ್ಟಿತೆ!"

—ಎನ್ನುತ್ತ ತನ್ನಲ್ಲಿ ತಾನೆ ಹೇಳಿಕೊಂಡು ಅತ್ತಳು.

ಭದ್ರಸೇನನಿಗೆ ಅವಳ ದುಃಖವನ್ನು ನೋಡಲಾಗಲಿಲ್ಲ. ಆದುದರಿಂದ ಅವಳ ಭಯವನ್ನು ಹೋಗಲಾಡಿಸುವುದಕ್ಕೆಂದು ಅವನು,

"ರಮಣಿ, ಹೆದರಬೇಡ. ನಾನಿಲ್ಲೇ ಸಮೀಪದಲ್ಲಿರುವಾಗ ಹೆದರಿಕೆಗೆ ಕಾರಣವೇನು? ಸಂತೋಷ ತಳೆದುಕೊ. ಸುಂದರಿಯೆ, ನಿನ್ನ ಸೊಬಗಿನ ಕತೆಯನ್ನು ನನಗೆ ಹಿಂದೊಮ್ಮೆ ಬ್ರಾಹ್ಮಣರು ವರ್ಣಿಸಿದ್ದರು. ಆದುದರಿಂದಲೇ ನಾನು ನಿನ್ನನ್ನು ವರಿಸಬೇಕೆಂದು ನಿನ್ನ ತಂದೆಯೊಡನೆ ಯುದ್ಧಕ್ಕಾಗಿ ಬಂದೆನು. ಈಗಂತೂ ಎಲ್ಲವೂ ಕೈಗೂಡಿವೆ. ಯುದ್ಧದಲ್ಲಿ ನಾನೇ ಗೆದ್ದಿದ್ದೇನೆ. ನಿನ್ನನ್ನು ಇಲ್ಲಿಯ ತನಕ ಹೊತ್ತು ತಂದಿದ್ದೇನೆ. ಆದುದರಿಂದ ಕೊಲ್ಲುವುದಕ್ಕಾಗಿ ತಂದುದೆಂದು ಭ್ರಮಿಸಬೇಡ. ನನ್ನನ್ನು ಪ್ರೀತಿಯಿಂದ ವರಿಸು...... ನನಗೆ ಅಷ್ಟಭಾಗ್ಯಗಳಿವೆ. ಅನೇಕ ಮಂದಿ ಆಶ್ರಿತರಾಜರಿಂದ ಕಪ್ಪವನ್ನು ಪಡೆಯು ತ್ತಿದ್ದೇನೆ. ಅಂಥಾ ನಾನು ನಿನ್ನನ್ನು ಅಪೇಕ್ಷಿಸುತಿದ್ದೇನೆ."

—ಧೈರ್ಯವನ್ನು ಕೊಡುತಿದ್ದಂತೆಯೆ ತನ್ನ ಮನಸ್ಸಿನ ಅಭಿಪ್ರಾಯ ವನ್ನೂ ತಿಳಿಸಿಬಿಟ್ಟನು.

ಅವನ ಮಾತುಗಳನ್ನೆಲ್ಲ ರತ್ನಾವತಿಯು ಕಿವಿಗೊಟ್ಟು ಕೇಳಿ, ಕಡೆಗೆ ವಿನಯದಿಂದ ಹೀಗೆಂದಳು—

"ಧೀರನೆ, ನೀನಾಡುವ ಮಾತು ನಿಜವಾಗಿರಬಹುದು. ಆದರೇನು ಮಾಡಲಿ? ನಡೆದುಹೋದ ಸಂಗತಿ ಬೇರೆಯೇ ಒಂದಿದೆ. ನನ್ನ ತಂದೆಯು

ನನ್ನನ್ನು ವತ್ಸರಾಜನಿಗೆ ವಿವಾಹ ಮಾಡಿಕೊಡುವುದೆಂದು ಹೇಳಿರುತ್ತಾರೆ. ಆದುದರಿಂದ ಅವರ ಮಾತನ್ನು ನಾನು ಮೀರಲಾರೆ. ಹೀಗಾಗಿ ನಿನ್ನನ್ನು ವರಿಸಲಾರೆ. ನೀನು ಧರ್ಮವಿಚಾರಗಳನ್ನು ತಿಳಿಯದವನಲ್ಲ. ನಾನೀಗ ನಿನಗೆ ಪರಸ್ತ್ರೀಯಾಗಿರುವೆನು. ಪರಸ್ತ್ರೀಯನ್ನು ಬಯಸುವುದು ಪಾಪವಲ್ಲವೆ? ನನ್ನನ್ನು ನಿನ್ನ ತಂಗಿಯೆಂದು ಭಾವಿಸಿ ನಮ್ಮ ನಗರಕ್ಕೆ ಒಯ್ದು ಬಿಟ್ಟರೆ ನಿನಗೆ ಪುಣ್ಯಬಂದೀತು."

ಅದಕ್ಕೆ ಭದ್ರಸೇನನು ನಕ್ಕನು.

"ಚಂದ್ರಮುಖಿಯೆ, ನೀನು ಹೀಗೂ ಹೇಳಬಹುದೆ? ಭಾಗ್ಯಶಾಲಿಯಾಗಿರುವ ನನ್ನನ್ನು ವರಿಸಿ ಸುಖಪಡುವುದನ್ನು ಬಿಟ್ಟು ಹೀಗೆ ಮಾತಾಡುವುದೆ? ಹಿಂದಕ್ಕೆ ರುಕ್ಮನೆಂಬವನು ತನ್ನ ತಂಗಿಯಾಗಿದ್ದ ರುಕ್ಮಿಣಿಯನ್ನು ಶಿಶುಪಾಲನೆಂಬವನಿಗೆ ನಿಶ್ಚಯಮಾಡಿದನು. ಆದರೆ ಆ ರುಕ್ಮಿಣಿಯು ಗುಟ್ಟಿನಲ್ಲಿ ಕೃಷ್ಣನಿಗೆ ಪತ್ರಬರೆದು ತರಿಸಿ ಅವನನ್ನು ವರಿಸಲಿಲ್ಲವೆ? ಹಾಗೆಯೇ ನೀನೂ ಈಗ ನನ್ನ ಕೈಯೊಳಗಾಗಿರುವೆ. ದೇವೇಂದ್ರನ ಮಗನಂತೂ ಶನಿಯ ಪತ್ನಿಯನ್ನು ಸಹ ಒಯ್ದಿರುವನು. ಹೀಗಿರುವಾಗ ನನ್ನನ್ನು ನೀನು ಪರಪುರುಷನೆಂದು ತಿಳಿಯುವುದು ಆಶ್ಚರ್ಯ! ನೀನಿನ್ನೂ ಮದುವೆಯಾಗದವಳು. ನನಗೆ ಯಾವ ರೀತಿಯಿಂದಲೂ ಪರನಾರಿಯಲ್ಲ. ಸುಮ್ಮನೆ ಆ ಬಡ ವತ್ಸರಾಜನನ್ನು ಏಕಾಗಿ ಮೆಚ್ಚಿಕೊಳ್ಳುವೆ?"

—ಎಂದು ಅವಳ ಮನಸ್ಸನ್ನು ಒಲಿಸಿಕೊಳ್ಳಲು ಯತ್ನಿಸಿದನು. ಆದರೆ ಅವನ ಮಾತುಗಳಿಂದ ರತ್ನಾವತಿಗೆ ಸಿಟ್ಟು ಬಂದಿತೇ ಹೊರತು ಮನಸ್ಸು ತಿರುಗಲಿಲ್ಲ.

'ಇವನ ಅಹಂಕಾರವು ಸುಡಲಿ!' ಎಂದೆಣಿಸಿದಳು.

"ತಲೆಯ ಮೇಲೆ ಎಷ್ಟೇ ನೀರನ್ನು ಸುರಿದರೂ ಅದು ಮೆತ್ತಗಾಗದು. ಮರುಳನಾದ ನಿನ್ನೊಡನೆ ನಾನು ಎಷ್ಟು ಹೇಳಿದರೂ ನಿನಗೆ ದಯೆ ಬಂದೀತೆ? ರಾವಣನು ಸೀತೆಗಾಗಿ, ಕೀಚಕನು ಸೈರಂಧ್ರಿಗಾಗಿ ಪ್ರಾಣ ಕಳೆದುಕೊಂಡುದನ್ನು ಒಮ್ಮೆ ಜ್ಞಾಪಿಸಿಕೊಳ್ಳು. ನಿನ್ನನ್ನು ಉತ್ತಮ ಕುಲದವನೆಂದೂ, ಒಳ್ಳೆಯ ರಾಜನೆಂದೂ ಹೇಳಿಕೊಳ್ಳುತ್ತಿರುವೆಯಲ್ಲ! ಆ ಮಾತೆಲ್ಲ ಸುಳ್ಳಾಗಿರ

ಬೇಕು. ನಿನ್ನ ರೀತಿ ಮಾತ್ರ ದುಸ್ತರವಾಗಿದೆ. ಪರಸ್ತ್ರೀಯನ್ನು ಬಯಸಿ ಪಾಪಿಯಾಗಿ ನರಕಕ್ಕೆ ಹೋಗಬೇಡ. ಮರುಳನಂತೆ ಆಚರಿಸಬೇಡ”

—ಎಂದು ಸಿಟ್ಟಿನಿಂದ ತೀಕ್ಷ್ಣವಾಗಿ ನುಡಿದಳು.

ಅದನ್ನು ಕೇಳಿ ಭದ್ರಸೇನನಿಗೆ ತೀವ್ರವಾದ ಅಪಮಾನವಾಯಿತು. ತನ್ನ ಕೋಪವನ್ನು ತಾನೇ ಸೈರಿಸದಾದನು. ಇಷ್ಟೊಂದು ದುಷ್ಟೆಯಾಗಿರುವ ಈ ಸ್ತ್ರೀಯನ್ನು ಈಗಲೇ ಕಡಿದಿಕ್ಕಿದರೆ ಕೇಳುವವರಾರು? —ಎಂದೆಣಿಸಿ ಅವನು ಹರಿತವಾದ ತನ್ನ ಖಡ್ಗಕ್ಕೆ ಕೈಯಿಕ್ಕಿದನು! ಅಷ್ಟರಲ್ಲಿ,

“ರಾಜನೆ, ಸ್ತ್ರೀಹತ್ಯೆಯನ್ನು ಮಾಡಬೇಡ!”

—ಎಂಬ ಅಶರೀರ ವಾಣಿಯೊಂದು ಗಂಭೀರವಾಗಿ ಕೇಳಿಸಿತು.

ರಾಜನು ವಿಸ್ಮಯದಿಂದ, ತನ್ನ ಖಡ್ಗವನ್ನು ಅಲ್ಲಿಗೆನೇ ಒತ್ತಿಟ್ಟು, ಮುಂದೇನು ಮಾಡುವುದೆಂದು ಅರಿಯದೆ ಯೋಚಿಸತೊಡಗಿದನು.

೬

ನರಭಕ್ಷಕ ವಿದ್ಯುಲ್ಲೋಚನ!

ಕ್ರೂರರಾಕ್ಷಸನ ಗರ್ಜನೆಯೊಂದು ಭಯಂಕರವಾಗಿ ಕೇಳಿಸಿತು!

ಆ ವನದೊಡೆಯನಾದ ವಿದ್ಯುಲ್ಲೋಚನನೆಂಬ ರಕ್ಕಸನು ಬೇಟೆಗಾಗಿ ಸಂಚರಿಸುತಿದ್ದಾಗ, ಮನುಷ್ಯರ ವಾಸನೆಯನ್ನು ತಿಳಿದು, ಹುಡುಕಿಕೊಂಡು ಕಾಡನ್ನೇ ಅಡಿಮೇಲುಮಾಡುತ್ತಾ ಬಂದನು!

ಬಂದು ಭದ್ರಸೇನ ರತ್ನಾವತಿಯರನ್ನು ಕಂಡನು! ಅವನು ತನ್ನ ಮೂಗನ್ನು ವಿಕಾರವಾಗಿ ಅರಳಿಸುತ್ತ,

"ಮನುಷ್ಯಪ್ರಾಣಿಯೆ ನೀನು ಯಾರು? ಹುಲಿಯ ತುತ್ತಿಗೆ ಗುರಿಯಾಗುವ ಕುರಿಯಂತೆ, ಹೆಣ್ಣೊಬ್ಬಳನ್ನು ಕೂಡಿಕೊಂಡು, ಸಾಯುವುದಕ್ಕಾಗಿ ಇಲ್ಲಿಗೆ ಬಂದಿರುವ ಪ್ರಾಣಿ ಯಾರು ನೀನು? ಬಹಳ ಸಂತೋಷ! ಬಹಳ ಸಂತೋಷ! ಮನುಷ್ಯರ ಮಾಂಸವನ್ನು ನಾನು ತಿನ್ನದೆ ಬಹುದಿನಗಳಾಗಿವೆ. ಈಗ ನೀನಾಗಿ ಸಿಕ್ಕಿದೆ. ನೀನು ಕರೆದು ತಂದಿರುವ ಈ ಹೆಣ್ಣನ್ನು ನನ್ನ ಮನೆಗೆ ಎತ್ತಿಕೊಂಡು ಹೋಗಿ ಸಾಕಿ ಕೊಬ್ಬಿಸುತ್ತೇನೆ. ಮತ್ತೊಂದು ದಿನ ಹಬ್ಬದೂಟಕ್ಕೆ ಇವಳನ್ನು ಮಾಂಸಮಾಡುತ್ತೇನೆ. ಅಲ್ಲದಿದ್ದರೆ ಇವಳನ್ನೇ ನನ್ನ ಮಡದಿಯನ್ನಾಗಿ ಮಾಡಿಕೊಳ್ಳುತ್ತೇನೆ. ತಿನ್ನುವುದಕ್ಕೆ ಹೇಗಿದ್ದರೂ ಗಂಡು ಪ್ರಾಣಿಯಾದ ನೀನಿರುವೆ. ನಿನ್ನನ್ನು ತಿನ್ನದೆ ನನ್ನ ಮಾಂಸದ ತೊಡು ನಿಲ್ಲುವುದಿಲ್ಲ"

—ಎಂದು ಬಾಯ್ತೆರೆದುಕೊಂಡು ಮುಂದುವರಿದನು.

ರತ್ನಾವತಿಯು ಭಯದಿಂದ ಕಂಪಿಸಿದಳು! ಭದ್ರಸೇನನು ಹರಿತವಾದ ಬಾಣಗಳನ್ನು ತೆಗೆದು,

"ಹೇ ನುಸಿಯೆ, ಯಾಕಿಷ್ಟು ಬೊಬ್ಬಿಡುತ್ತಿರುವೆ? ನಿಲ್ಲು ನಿನ್ನ ಸದ್ದಡಗಿಸುತ್ತೇನೆ"

—ಎನ್ನುತ್ತಾ ಆ ರಾಕ್ಷಸನನ್ನು ಹೊಡೆದನು.

ರಕ್ಕಸನ ರೋಷವು ಇನ್ನೂ ಹೆಚ್ಚಾಯಿತು. ಅವನು ಭದ್ರಸೇನನನ್ನು ಉರುಳಿಸುವುದಕ್ಕಾಗಿ ಸಿದ್ಧನಾಗುತ್ತಾ—

"ನಿನ್ನನ್ನು ಹಲ್ಲಿಗೆ ತಾಗದಂತೆ ನುಂಗದಿದ್ದರೆ ನಾನು ಇದ್ದೇನು ಫಲ?" ಎಂದನು.

"ಗುಡ್ಡಬೆಟ್ಟಗಳಲ್ಲಿ ನರಿ ಹಂದಿಗಳನ್ನು ಹೊಡೆದು ತಿಂದು ಕೊಬ್ಬಿದ ನಿನ್ನ ಡೊಳ್ಳನ್ನು ಈಗಲೇ ಸೀಳುತ್ತೇನೆ"

—ರಾಜನು ಮತ್ತೂ ಹಲವಾರು ಬಾಣಗಳನ್ನು ಎಸೆದನು.

ರಾಕ್ಷಸನು ಬೆಟ್ಟದ ಮರವೊಂದನ್ನು ಮುರಿದು ಭದ್ರಸೇನನ ತಲೆಗೆ ಜಪ್ಪಿಬಿಟ್ಟನು.

ರಾಜನು ತಲೆಯೊಡೆದು ಬಿದ್ದು ಸತ್ತನು! ಇನ್ನವನಿಗೆ ರತ್ನಾವತಿಯ ಮೇಲಿನ ಮೋಹವೆಲ್ಲಿ?

ಆದರೆ ಅವನ ಬದಲಿಗೆ ಕ್ರೂರ ರಾಕ್ಷಸನು ತನ್ನನ್ನು ಸಮಿಾಪಿಸುತ್ತಿರುವುದನ್ನು ಅವಳು ನೋಡಿದಳು! ಗರುಡನ ಬಾಯಿಂದ ತಪ್ಪಿದ ನಾಗವು ಮುಂಗುಸಿಯ ಎದುರಿಗೆ ಬಿದ್ದಂತಾಗಿತ್ತು— ಅವಳ ಗತಿ!

"ಅಯ್ಯಯ್ಯೋ ಶಿವನೆ! ನಾನು ಮುಂದೇನು ಮಾಡಲಿ? ಈ ರಾಕ್ಷಸನು ನನ್ನನ್ನೂ ಕೊಲ್ಲುವುದಕ್ಕಾಗಿ ಬರುತ್ತಿರುವನಲ್ಲಾ! ರಾಜಪುತ್ರಿಯಾಗಿದ್ದ ನನಗೊದಗಿದ ಗತಿಯೆ! ಏಕಾಗಿ ನನ್ನ ತಂದೆಯು ನನ್ನನ್ನು ವತ್ಸರಾಜನಿಗೆ ಕೊಡುವುದೆಂದು ನಿಶ್ಚಯಿಸಿದರೊ! ಏಕಾಗಿ ಈ ಭದ್ರಸೇನನು ನನ್ನನ್ನು ಇಲ್ಲಿಯ ವರೆಗೆ ತಂದನೋ? ಈ ರಕ್ಕಸನಾದರೂ ಅವನನ್ನು ಯಾಕಾಗಿ ಕೊಂದನೋ! ರಾಜನು ನನ್ನನ್ನು ಕೊಲ್ಲುವುದಕ್ಕಾಗಿ ಕತ್ತಿಯನ್ನು ಸೆಳೆದಾಗ ದೇವತೆಗಳು ಅಶರೀರವಾಣಿಯಿಂದ ಯಾಕಾಗಿ ತಡೆದರೋ! ಆಗಲೇ ನಾನು

ಸತ್ತಿದ್ದರೆ ಚೆನ್ನಾಗಿತ್ತು. ಈ ದುಷ್ಟನು ನನ್ನನ್ನು ಒಯ್ದು ಮುಂದೇನು ಮಾಡಲಿರುವನೋ!......"

ರತ್ನಾವತಿಯು ಹಂಬಲಿಸಿ ಗೋಳಿಟ್ಟಳು. ಪರಮಾತ್ಮನಲ್ಲಿ ಮೊರೆಯಿಟ್ಟಳು.

ಅವಳು ಹೀಗೆ ದೇವರನ್ನು ಧ್ಯಾನಿಸುತ್ತಿರುವಾಗ ರಾಕ್ಷಸನು ಅವಳೆದುರು ಬಂದು ನಿಂತು ಸಂತೋಷದಿಂದ ತನ್ನ ಕೋರೆದಾಡೆಗಳನ್ನು ಕಿಸಿದು,

"ಸುಂದರಿಯೆ, ಹೆದರಬೇಡ. ನಿನ್ನನ್ನು ನಾನು ಎಷ್ಟಕ್ಕೂ ತಿನ್ನುವುದಿಲ್ಲ; ಲಗ್ನಮಾಡಿಕೊಂಡು, ಸುಖವಾಗಿ ಸಾಕುತ್ತೇನೆ. ಒಮ್ಮೆ ನಿನ್ನ ಮುಖವನ್ನು ಮೇಲೆತ್ತಿ ನೋಡು. ನಿನ್ನೊಡನಿದ್ದ ಮನುಷ್ಯನು ಸತ್ತುಹೋಗಿದ್ದಾನೆ. ಆದುದರಿಂದ ಇನ್ನೇನೂ ಯೋಚಿಸಬೇಡ" ಎಂದನು.

ರತ್ನಾವತಿಯು, ಆಪತ್ತಿನಲ್ಲಿ ಅತಿಧೈರ್ಯವನ್ನು ತಳೆಯಬೇಕು— ಎಂಬುದಾಗಿ ಎಣಿಸಿದಳು. ಆದುದರಿಂದ ಆ ಕ್ರೂರಿಯೊಡನೆ ಹೀಗೆಂದಳು.

"ರಕ್ಕಸನೆ, ಕೆಟ್ಟ ಮಾತುಗಳನ್ನು ಆಡಬೇಡ. ನಿನ್ನ ಜಾತಿಯವನೇ ಆದ ರಾವಣ, ಮತ್ತೊಬ್ಬ ಕೀಚಕ— ಇವರೆಲ್ಲ ಹೆಣ್ಣಿನಾಸೆಯಿಂದಲೇ ಸತ್ತುಹೋದರು. ರುಮೆಯನ್ನು ಬಚ್ಚಿಟ್ಟುಕೊಂಡ ವಾಲಿ, ಅಹಲ್ಯೆಯನ್ನು ಕೆಡಿಸಿದ್ದ ದೇವೇಂದ್ರ— ಮೊದಲಾದವರೂ ಹೆಣ್ಣಿನಿಂದಾಗಿಯೇ ಹಾಳಾದರು. ನಿನಗೂ ಅವರದ್ದೇ ದುರ್ಗತಿಯು ಕಾದಿದೆ ಎಂಬುದಕ್ಕೆ ನೆನಪಿಗಾಗಿ ನಿನ್ನ ಸೆರಗಿನಲ್ಲಿ ಗಂಟು ಹಾಕಿಕೊಳ್ಳು."

"ಹೀಗೆ ಮಾತಾಡಬೇಡ ಸುಂದರಿ! ಹುಟ್ಟಿದವನು ಸಾಯಲೇಬೇಕು— ಎಂಬುದು ಬ್ರಹ್ಮನ ನಿಯಮವಾಗಿರುವಾಗ ನಾನೊಬ್ಬನು ಆಗದೆಂದರೆ ನಡೆದೀತೆ? ಪ್ರಾಣವನ್ನು ಒಯ್ಯುವ ಮೃತ್ಯುದೇವಿಯು 'ಇದು ಕಾಡು, ಇದು ಉಪ್ಪರಿಗೆ' —ಎಂಬುದಾಗಿ ಭೇದವೆಣಿಸುವುದಿಲ್ಲ. ಈ ಸಂಗತಿ ನಗಗೂ ಗೊತ್ತಿದೆ. ದೇವಸ್ತ್ರೀಯರು ಕೂಡಾ ಪರಪುರುಷರನ್ನು ಅಪೇಕ್ಷಿಸಿದ ಉದಾಹರಣೆಗಳಿವೆ. ನೀನು ಮಾತ್ರ ನನ್ನನ್ನು ಮೆಚ್ಚೆನೆಂಬುದು ಸರಿಯೆ? ನನ್ನಲ್ಲಿ ಯಾವ ಕೊರತೆಯಿದೆ ಹೇಳು?"

"ರಾಕ್ಷಸನೆ, ನೀನು ನನ್ನ ಪ್ರಾಣವನ್ನೇ ಬೇಕಾದರೂ ಕಳೆದುಬಿಡು; ಎಷ್ಟಕ್ಕೂ ನಿನ್ನನ್ನು ಸೇರಲಾರೆನು. ಹೀನನಾದ ನಿನ್ನ ಮುಖವನ್ನು ಕೂಡಾ ನೋಡಲಾರೆ"

–ರತ್ನಾವತಿಯು ಬೇರೆಡೆಗೆ ಮುಖ ತಿರುಗಿಸಿದಳು.

ಅವಳ ವರ್ತನೆಯನ್ನು ಕಂಡು ವಿದ್ಯುಲ್ಲೋಚನನಿಗೆ ಸಿಟ್ಟು ಸಹಿಸದಂತಾಯಿತು.

"ಇಂದಿನಿಂದ ನಿನಗೆ ಎರಡು ವಾರಗಳ ಅವಧಿಯನ್ನು ಕೊಟ್ಟಿರುತ್ತೇನೆ. ಅಷ್ಟರೊಳಗೆ ನಿನ್ನಲ್ಲಿ ನೀನು ವಿಚಾರಿಸಿಕೊಂಡು ನನ್ನ ಮಾತಿಗೆ ಒಪ್ಪಿದರೆ ಸರಿ, ತಪ್ಪಿದೆಯೆಂದರೆ ಮತ್ತೆ ನಿನ್ನ ಪ್ರಾಣವನ್ನು ಉಳಿಸಲಾರೆ"

–ಎಂದು ಅವಳನ್ನು ಎತ್ತಿಕೊಂಡು ತನ್ನ ಅರಮನೆಗೆ ಒಯ್ದನು. ಅಲ್ಲಿ ಬಂಧನದಲ್ಲಿರಿಸಿದನು.

ರತ್ನಾವತಿಯು ತನ್ನ ಕಡೆಗಾಲವನ್ನು ಕಾಯುತ್ತಾ ಕೊರಗುತ್ತಿದ್ದಳು.

೭

ಸೆರೆಮನೆಯಲ್ಲಿ ವರನ ದರ್ಶನ!

ತರುಣನೂ ಸುಂದರನೂ ಆಗಿದ್ದ ಕುಶುಂಬಿ ದೇಶದ ವತ್ಸರಾಜನು ಬೇಟೆಗಾಗಿ ಹೊರಟನು. ಉತ್ತಮವಾದ ಕುದುರೆಯನ್ನೇರಿ, ಬೇಡರ ಪಡೆಯನ್ನು ಕೂಡಿಸಿ ವಿನೋದಕ್ಕಾಗಿ ಬೇಟೆಯಾಡುತ್ತಾ ಕಾಡಿನಿಂದ ಕಾಡಿಗೆ ನುತ್ತಿದನು.

ಬೇಡರ ಬಳಗವು ಹಿಡಿ, ಕಡಿ, ಹೊಡಿ, ಜಡಿ, ಬಡಿ, ತಡಿ– ಎನ್ನುತ್ತಾ ಬೊಬ್ಬಿಡುತಿತ್ತು. ಆ ಬೊಬ್ಬೆಯನ್ನು ಕೇಳಿದ ಮೃಗಗಳು ಗಾಬರಿಯಿಂದ ಓಡುತಿದ್ದವು. ಆಗಲೇ ಬೇಡರು ಅವುಗಳನ್ನು ಅಟ್ಟಿ ಹೊಡೆದು ಕೊಲ್ಲುತಿದ್ದರು. ಪಕ್ಷಿಗಳನ್ನು ಬಲೆಬೀಸಿ ಹಿಡಿಯುತಿದ್ದರು.

ವತ್ಸರಾಜನು ಜಿಂಕೆಯೊಂದನ್ನು ನೋಡಿದನು. ಅದು ಪ್ರಾಣಭಯದಿಂದ ಓಡಲಾರಂಭಿಸಿತು. ರಾಜನೂ ಅದನ್ನು ಬೆಂಬತ್ತಿ ಓಡಿದನು. ಹೊಳೆಯೊಂದನ್ನು ಹಾದು, ಬೆಟ್ಟವನ್ನು ಏರಿ, ಕಂದರವನ್ನು ನೆಗೆದು, ತಗ್ಗಿನಲ್ಲಿ ಹಾರಿ, ಇಕ್ಕಟ್ಟಿನಲ್ಲಿ ನುಸುಳಿ ಆ ಜಿಂಕೆಯು ರಾಜನನ್ನು ಎಷ್ಟೋ ದೂರದ ತನಕ ಸೆಳೆದೊಯ್ದು ಕಡೆಗೆ ಕಾಣದೆಹೋಯಿತು.

ರಾಜನು ಬಳಲಿದನು; ಬಾಯಾರಿದನು. ಒಂದು ಮರದ ನೆರಳಿನಲ್ಲಿ ತನ್ನ ಕುದುರೆಯನ್ನು ನಿಲ್ಲಿಸಿ, ಕೆಳಗಿಳಿದು ಕುಳಿತು ನಾಲ್ಕು ದಿಕ್ಕುಗಳನ್ನು ನೋಡುತ್ತ ಕುಳಿತನು.

ಆ ಕಾಡಿನ ಸೌಂದರ್ಯವು ವತ್ಸರಾಜನ ಮನಸ್ಸಿಗೆ ಸಂತೋಷವನ್ನು ಕೊಟ್ಟಿತು. ಅವನು ಈ ವನವನ್ನು ನೋಡಿರಲಿಲ್ಲ. ಹಾಗೆಯೇ ಎತ್ತೆತ್ತಲೂ ನೋಡುತ್ತಲಿದ್ದಾಗ ಆ ಕಾಡಿನ ದೂರದೊಂದು ಮೂಲೆಯಲ್ಲಿ ಮರಗಳ ಎಡೆಯಲ್ಲಿ ಎತ್ತರವಾಗಿದ್ದ ಅರಮನೆಯೊಂದು ಕಾಣಿಸಿತು. ರಾಜನು ಆಶ್ಚರ್ಯಗೊಂಡು ಆ ಮನೆಯಿರುವ ಕಡೆಗೆ ನಡೆದನು.

ಅರಮನೆಯ ಚೆಲುವನ್ನು ಸಮೀಪದಿಂದ ನೋಡುವಾಗ ಅವನಿಗೆ ಇನ್ನಷ್ಟು ಸೋಜಿಗವೆನಿಸಿತು.

ಮತ್ತೊಂದರ್ಧಕ್ಷಣದಲ್ಲಿ ಅವನ ಸೋಜಿಗವು ಇಮ್ಮಡಿಯಾಯಿತು! ಕಾರಣ–

ಅವನು ಸ್ವಲ್ಪ ಹೊತ್ತಿನ ಮೊದಲು ಓಡಿಸಿಕೊಂಡು ಬಂದಿದ್ದ ಆ ಹೆದರಿದ ಜಿಂಕೆಯ ಕಣ್ಣುಗಳನ್ನು ಅಲ್ಲಿ ಉಪ್ಪರಿಗೆಯ ಮೇಲೆ ಕಂಡನು! ಆದರೆ ಇನ್ನೂ ಸರಿಯಾಗಿ ನೋಡುವಾಗ ಆ ಕಣ್ಣುಗಳು ಜಿಂಕೆಯವಲ್ಲ, ಹೆದರಿದ ಹೆಣ್ಣೊಬ್ಬಳದೆಂದು ಗೊತ್ತಾಯಿತು. ಆದರೂ ಅವನ ಕುತೂಹಲವು ಕಡಿಮೆಯಾಗಲಿಲ್ಲ. ಸರಿಯಾಗಿ ತಿಳಿದುಕೊಳ್ಳಬೇಕೆಂದು ಎಣಿಸಿ ಆ ಮನೆಯ ಅಂಗಳವನ್ನು ಪ್ರವೇಶಿಸಿದನು.

ಮನೆಯ ಒಡೆಯರಾರೂ ಅಲ್ಲಿರಲಿಲ್ಲ. ಅವಳು ಒಬ್ಬಾಕೆಯೇ ಅಲ್ಲಿರಲು ಕಾರಣವೇನಿರಬಹುದು, ಎಂಬುದನ್ನು ತಿಳಿಯುವುದಕ್ಕಾಗಿ ವತ್ಸರಾಜನು ಉಪ್ಪರಿಗೆಯನ್ನೇರಿದನು. ಚಿನ್ನದ ಗೊಂಬೆಯಂತಿದ್ದ ರತ್ನಾವತಿಯನ್ನು ಕಂಡನು.

"ಮನೋಹರಿ, ನೀನು ಯಾರಾಗಿರುವೆ? ನಿನ್ನನ್ನು ಪಡೆದ ತಂದೆ ಯಾರು? ಕೈಹಿಡಿದ ಪತಿ ಯಾರು? ನಿನ್ನ ಸುಂದರವಾದ ಮುಖವೇಕೆ ಬಾಡಿಹೋಗಿದೆ? ಯಾವ ಚಿಂತೆಯು ನಿನ್ನನ್ನು ಬಾಧಿಸುತ್ತಿದೆ? ಹೆದರಬೇಡ. ನಾನೇನೂ ಮೋಸಗಾರನಲ್ಲ. ಶಿವನಾಣೆಯಾಗಿ ನಾನು ಕಪಟಿಯಲ್ಲ" ಎಂದು ಮಾತನಾಡಿಸಿದನು.

ವತ್ಸರಾಜನನ್ನು ರತ್ನಾವತಿಯು ಹಿಂದೆಂದೂ ಕಂಡಿರಲಿಲ್ಲ. ಆದರೂ ಇಂದು ಹೊಸತಾಗಿ ಅವನನ್ನು ಕಂಡೊಡನೆ ಅವಳಿಗೆ ಒಂದು ಬಗೆಯ ಲಜ್ಜೆಯೆನಿಸಿತು. ಅವಳು ತಲೆ ತಗ್ಗಿಸಿದಳು. ಅದನ್ನು ಕಂಡು ರಾಜನು

"ಕೋಮಲಾಂಗಿ, ನಿನ್ನ ಪರಿಚಯವನ್ನು ತಿಳಿಯುವುದಕ್ಕೆ ನನ್ನ ಮನಸ್ಸು ಆತುರಗೊಂಡಿದೆ. ಸಂತೋಷವಾಗಿ ಹೇಳಿದ್ದರೆ ನಾನು ಧನ್ಯನಾಗುತ್ತಿದ್ದೆ" ಎಂದನು.

ಅವನ ಸಭ್ಯವಾದ ನುಡಿಗಳನ್ನು ಕೇಳಿ, ಮತ್ತವನ ಶುಭಾಕಾರವನ್ನು ನೋಡಿ ರತ್ನಾವತಿಗೆ ಸ್ವಲ್ಪ ಸ್ವಲ್ಪವಾಗಿ ಧೈರ್ಯ ಬರಲಾರಂಭಿಸಿತು. ಅವಳು ತನ್ನ ಗೋಳಿನ ಕತೆಯನ್ನು ಮುಚ್ಚುಮರೆಯಿಲ್ಲದೆ ಅವನೊಡನೆ ಹೇಳಿದಳು.

"ನನ್ನ ಪರಿಚಯವನ್ನು ಕೇಳುತ್ತಿರುವ ನೀವು ಯಾರೋ ನಾನರಿಯೆ. ಯಾಕಾಗಿ ನನ್ನನ್ನು ಹೀಗೆ ಪ್ರಶ್ನಿಸುತ್ತಿರುವಿರಿ ಎಂಬುದನ್ನೂ ತಿಳಿಯೆ. ಹೆಣ್ಣಾಗಿ ಹುಟ್ಟಿರುವ ನನ್ನನ್ನು ಹೀಗೆ ವಿಚಾರಿಸುವುದರಿಂದ ನಿಮಗೆ ಬರುವ ಫಲವೇನು? ನಾನಂತೂ ಅದೃಷ್ಟಹೀನೆಯಾಗಿರುವೆನು. ಹುಟ್ಟಿದುದು ಅಂಗದೇಶದಲ್ಲಿ; ದೃಢವರ್ಮ ದೊರೆಯ ಮಗಳು ನಾನು! ಕುಶುಂಬಿಯ ಒಡೆಯರಾದ ವತ್ಸರಾಜರಿಗೆ ವಿವಾಹ ಮಾಡಿಕೊಡುವುದು– ಎಂದು ನನ್ನ ತಂದೆ ನಿಶ್ಚಯಿಸಿದ್ದರು. ಆದರೆ ನನ್ನ ವಿಧಿಯು ನನ್ನನ್ನು ಹಾಗಾಗಲು ಬಿಡಲಿಲ್ಲ. ಯಾರೋ ಒಬ್ಬ ರಾಜನು ಬಂದು ನಮ್ಮ ತಂದೆಯನ್ನು ಸೋಲಿಸಿ, ನನ್ನನ್ನು ಈ ವನಕ್ಕೆ ಎತ್ತಿತಂದನು. ಅವನನ್ನೊಬ್ಬ ರಕ್ಕಸನು ಕೊಂದನು. ಮತ್ತೆ ನನ್ನನ್ನು ವಶಪಡಿಸಿಕೊಳ್ಳಲು ಹಲವು ವಿಧಗಳಿಂದ ಯತ್ನಿಸಿದರೂ ಆಗದೆ, ಇಲ್ಲಿಗೆ ತಂದು ಬಂಧಿಸಿಟ್ಟಿರುವನು. ನನ್ನನ್ನು ಕಾಪಾಡುವವರು ಯಾರೂ ಇಲ್ಲದೆ ಹೋಯಿತು. ಆ ವತ್ಸರಾಜರು ಎಲ್ಲಿರುವರೋ! ನಿಮಗೆ ತಿಳಿದಿದ್ದರೆ ದಯವಿಟ್ಟು ಹೇಳುವಿರಾ? ಅವರ ಆಶ್ರಯವನ್ನು ಬಿಟ್ಟು ಬೇರೆ ಕುರಿಗಳಂಥವರನ್ನು ನಾನು ಸೇರುವುದುಂಟೆ? ಈ ರಾಕ್ಷಸನು ನನ್ನ ಪ್ರಾಣವನ್ನು ತೆಗೆದರೂ ಈತನನ್ನು ಹೊಂದಿ ಈ ಜಗತ್ತಿನಲ್ಲಿ ನಾನು ಬಾಳುವೆನೆ?"

ಸ್ವಲ್ಪ ಹೊತ್ತು ಸುಮ್ಮನಿದ್ದು ಮತ್ತೆ,

"ಆ ರಾಕ್ಷಸನು ಬರುವ ಹೊತ್ತಾಗುತ್ತಾ ಬಂತು. ನಿಮ್ಮನ್ನು ನೋಡಿದ ಸಂದರೆ ಕೊಲೆಮಾಡದೆ ಬಿಡಲಾರನು. ನನ್ನಿಂದಾಗಿ ನೀವೂ ಏಕೆ ಅಪಾಯಕ್ಕೆ ಒಳಗಾಗುವಿರಿ? ದಯವಿಟ್ಟು ನಿಮ್ಮ ಮನೆಗೆ ಹೋಗಿರಿ" ಎಂದಳು.

ವತ್ಸರಾಜನಿಗೆ ಅವಳಿಗೊದಗಿದ ಸಂಕಷ್ಟಗಳನ್ನು ಕೇಳಿ ವ್ಯಥೆಯಾಯಿತೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಹಾಗೆಯೇ ಸಂತೋಷವೂ ಆಯಿತು. ಅವಳ ಕಣ್ಣೀರನ್ನೊರಸಿ ಸಂತೈಸುತ್ತಾ,

"ಪ್ರಿಯೆ, ನನಗಾಗಿ ನೀನು ತುಂಬಾ ಕಷ್ಟಪಟ್ಟೆಯೆಂಬುದು ಗೊತ್ತಾಯಿತು. ಅದನ್ನು ಕೇಳಿ ನನ್ನ ಮನಸ್ಸಿಗೂ ಉಂಟಾಗಿರುವ ದುಃಖವನ್ನು ನಿನಗೆ ಹೇಗೆ ತಿಳಿಯಪಡಿಸಲಿ? ನಾನೇ ವತ್ಸರಾಜನು. ಬೇಟೆಗಾಗಿ ಬಂದವನು ಮೃಗವೊಂದನ್ನು ಹಿಂಬಾಲಿಸಿಕೊಂಡು ಈ ಕಾಡಿಗೂ ಬಂದೆನು. ಅದರಿಂದಾಗಿ ನಿನ್ನ ದರ್ಶನಲಾಭವು ನನಗಾಯಿತು. ರಾಕ್ಷಸನ ಭಯಕ್ಕಾಗಿ ನೀನೇನೂ ಚಿಂತಿಸಬೇಡ. ಕ್ಷಣಾರ್ಧದಲ್ಲಿ ಅವನನ್ನು ಸಂಹರಿಸಿ ನಿನ್ನನ್ನು ಕರೆದುಕೊಂಡು ಹೋಗುವೆನು" ಎಂದನು.

ವತ್ಸರಾಜನ ಮಾತುಗಳನ್ನು ಕೇಳಿ ರತ್ನಾವತಿಗೆ ಎಷ್ಟು ಸಂತೋಷವಾಯಿತೆಂಬುದನ್ನು ವರ್ಣಿಸುವುದಕ್ಕೆ ಸಾಧ್ಯವಿಲ್ಲ. ಅವಳ ಕಣ್ಣುಗಳಿಂದ ಆನಂದಾಶ್ರುಗಳು ತುಳುಕಿದವು. ರಾಜನನ್ನು ಅವಳು ಸ್ನೇಹದ ನೋಟದಿಂದ ನೋಡಿದಳು.

ಎರಡೇ ಎರಡು ಗಳಿಗೆ ಹೀಗೆಯೇ ಕಳೆದಿರಬಹುದು. ಆ ಕ್ರೂರ ರಾಕ್ಷಸ-ವಿದ್ಯುಲ್ಲೋಚನನು ಬಂದೇಬಿಟ್ಟನು! ಬಂದು ರತ್ನಾವತಿಯ ಸಮೀಪದಲ್ಲಿ ನಿಂತಿದ್ದ ವತ್ಸರಾಜನನ್ನು ನೋಡಿದನು; ಕೋಪದಿಂದ ಕಿಡಿಕಿಡಿಯಾದನು; ಆಕಾಶವು ಒಡೆದುಹೋಗುವಂತೆ ಭಯಂಕರವಾಗಿ ಗರ್ಜಿಸಿದನು.

"ಕಳ್ಳ ಹುಡುಗ, ಅರಮನೆಯಿಂದ ಕದ್ದುಕೊಳ್ಳಲು ಬಂದಿರುವೆಯಾ? ಯಾರು ನೀನು? ಈ ಕಾಡಿಗೇಕೆ ಬಂದೆ? ಬೇಗನೆ ಹೇಳು."

ಅವನ ಗರ್ಜನೆಯನ್ನು ಕೇಳಿ ರತ್ನಾವತಿಯು ಹೆದರಿ ನಡುಗಿದಳು. ವತ್ಸರಾಜನು ಮಾತ್ರ ಸ್ವಲ್ಪವೂ ಹೆದರಲಿಲ್ಲ.

"ಯಾಕೆ ಬೊಬ್ಬಿಡುವೆಯೋ ರಕ್ಕಸ? ನೀನು ಹೇಳಲಿರುವುದನ್ನು ಮೆಲ್ಲಗೆ ಹೇಳು. ವ್ಯರ್ಥವಾಗಿ ನಿನ್ನ ನಾಲಗೆಯನ್ನು ಕಿತ್ತುಕೊಳ್ಳಬೇಡ. ಈಗ ನಾನು ಬಂದಿರುವ ವಿಚಾರ ನಿನಗೆ ಬೇಕೆ? ಹಾಗಿದ್ದರೆ ಕೇಳು– ಈ ಹುಡುಗಿಯನ್ನು ನಾನು ಕರೆದುಕೊಂಡು ಹೋಗಬೇಕಾಗಿದೆ. ನೀನೇನಾದರೂ ಅಡ್ಡ

ಬಂದೆಯೆಂದಾದರೆ ನಿನ್ನ ಹೆಣವನ್ನು ಸಮುದ್ರಕ್ಕೆ ಎಸೆದು ಹೋಗುತ್ತೇನೆ. ಎಚ್ಚರಿಕೆ!"

ವತ್ಸರಾಜನ ವೀರವಾಕ್ಯಗಳನ್ನು ಕೇಳಿ ರಾಕ್ಷಸನ ಕೋಪ ಮತ್ತಷ್ಟು ಏರಿತು. ಅವನು ತೋರವಾದ ಮರಗಳನ್ನು ಮುರಿಮುರಿದು ರಾಜನ ಮೇಲೆ ಬಿಸುಟನು. ಆದರೆ ವತ್ಸರಾಜನು ಅವುಗಳಲ್ಲಿ ಕೆಲವನ್ನು ತಪ್ಪಿಸಿಕೊಂಡನು. ಇನ್ನು ಕೆಲವನ್ನು ತನ್ನ ಬಾಣಗಳಿಂದ ತುಂಡರಿಸಿದನು. ಬಳಿಕ,

"ಇಂಥಾ ಸಾಹಸಗಳನ್ನು ನೀನು ಎಷ್ಟುಮಾಡಿದರೂ ನನ್ನೊಡನೆ ನಡೆಯಲಾರದು. ಈಗಲೆ ಶರಣಾಗತನಾಗು. ನಿನ್ನನ್ನು ಕೊಲ್ಲದೆ ಬಿಟ್ಟು ಬಿಡುತ್ತೇನೆ. ಇಲ್ಲವಾದರೆ ನಿನಗೆ ಉಳಿಗಾವಿಲ್ಲ"

—ಎಂದು ಸಾರಿ ಹೇಳಿದನು.

ಆದರೆ ರಾಕ್ಷಸನು ಮತ್ತೂ ಮುಂದುವರಿದು ಬರಲು,

"ಜಾರರಿಗೆ, ಚೋರರಿಗೆ ಮತ್ತು ಕ್ರೂರಿಗಳಾದ ದುಷ್ಟರಿಗೆ ನನ್ನ ಬಾಣವೆಂದರೆ ಒಳ್ಳೆಯ ಮದ್ದು!"

—ಎನ್ನುತ್ತ ಮತ್ತೊಂದು ಹರಿತವಾದ ಬಾಣವನ್ನು ಬಿಟ್ಟನು. ಅದು ರಾಕ್ಷಸನ ಎದೆಯನ್ನು ಹೊಕ್ಕು ಬೆನ್ನಿನಲ್ಲಿ ಹೊರಟಿತು!

ಶೀಲವತಿಯರಾದ ಸ್ತ್ರೀಯರನ್ನು ವಂಚಿಸುವ ಅಥವಾ ಬಲಾತ್ಕರಿಸುವ ಅಧಮರು ಬದುಕುವುದುಂಟೆ? ಅವನು ದೊಪ್ಪನೆ ಬಿದ್ದು ಸತ್ತನು.

ರತ್ನಾವತಿಗೆ ಆದ ಆನಂದವಷ್ಟಿಷ್ಟಲ್ಲ. ವತ್ಸರಾಜನು ಅವಳನ್ನು ಕುದುರೆಯೇರಿಸಿಕೊಂಡು ತನ್ನ ಬೇಡರ ಪಡೆಯಿರುವಲ್ಲಿಗೆ ಬಂದು, ಆ ಬೇಡರನ್ನು ತನ್ನ ಪಟ್ಟಣಕ್ಕೆ ಹೋಗಲು ಹೇಳಿಕಳುಹಿಸಿ, ತಾನು ಅಂಗ ರಾಜ್ಯಕ್ಕೆ ಹೊರಟನು.

ಅತ್ತ ಅಂಗರಾಜ್ಯದಲ್ಲಿ, ದೃಢವರ್ಮನು ಸ್ವಲ್ಪ ಸಮಯದಲ್ಲಿ ಬೋಧ ಬಂದು, ತನ್ನ ಮುದ್ದುಮಗಳನ್ನು ಭದ್ರಸೇನನು ಒಯ್ದಿರುವುದನ್ನು ತಿಳಿದು ಚಿಂತಿಸುತಿದ್ದಾಗಲೇ ರತ್ನಾವತಿಯೊಡನೆ ವತ್ಸರಾಜನು ಅಲ್ಲಿಗೆ ಬಂದುಬಿಟ್ಟನು. ಅವರಿಬ್ಬರೂ ದೃಢವರ್ಮನಿಗೆ ವಂದಿಸಿದರು.

ಮಗಳ ಬಾಯಿಂದ ಅವಳಿಗೊದಗಿದ್ದ ಕಷ್ಟಗಳನ್ನು ಕೇಳಿ ತಂದೆಗೆ ತುಂಬ ಮರುಕವಾಯಿತು. ಅದನ್ನು ಕಂಡು ರತ್ನಾವತಿಯೇ ತನ್ನ ತಂದೆಯನ್ನು ಸಂತೈಸಿದಳು.

"ಅಪ್ಪಯ್ಯಾ. ಸುಮ್ಮನೆ ಯಾಕೆ ದುಃಖಪಡುತ್ತೀರಿ? ಭಗವಂತನ ಇಚ್ಛೆ ಹೇಗಿರುವುದೋ, ಹಾಗೆ ನಡೆದೇ ನಡೆಯುತ್ತದೆ. ಅದಕ್ಕೆ ನಾವು ತಲೆಬಾಗಲೇಬೇಕು. 'ತನ್ನ ಹೆಂಡತಿ, ತನ್ನ ಮಕ್ಕಳು' —ಎಂಬುದಾಗಿ ಮೋಹವುಳ್ಳವರಿಗೆಲ್ಲರಿಗೂ ಈ ಜನ್ಮದಲ್ಲಿ ದುಃಖವು ತಪ್ಪಿದ್ದಲ್ಲ. ಮನುಷ್ಯರಾದ ನಮ್ಮ ವಿಚಾರ ಹಾಗಿರಲಿ; ದೇವತೆಗಳಿಗೂ ಇಂಥಾ ದುಃಖವು ತಟ್ಟಿದುದುಂಟು. ಆದುದರಿಂದ ನಾವು ಮೋಹದ ಮರುಕವನ್ನು ಬಿಟ್ಟು ನೆಮ್ಮದಿಯಿಂದಿರುವುದು ಒಳ್ಳೆಯದು" ಎಂದಳು.

ಮಗಳ ವಿವೇಕದ ಬುದ್ಧಿಯ ಮಾತುಗಳನ್ನು ಕೇಳಿ ದೃಢವರ್ಮನಿಗೆ ತೃಪ್ತಿಯಾಯಿತು. ಅವನು ಮರುಗುವುದನ್ನು ಬಿಟ್ಟು ಮುಂದಿನ ಕೆಲಸಗಳಿಗೆ ಸಿದ್ಧತೆಗಳನ್ನು ಮಾಡಿಸತೊಡಗಿದನು.

ಮದುವೆಗೆ ದಿನವನ್ನು ನಿಶ್ಚಯಿಸಿದರು.

ಬೇರೆ ಬೇರೆ ದೇಶಗಳಿಗೆಲ್ಲ ಲಗ್ನಪತ್ರಿಕೆಗಳನ್ನು ಕಳುಹಿಸಲಾಯಿತು. ಪಟ್ಟಣವನ್ನು ತೋರಣ ಕಟ್ಟಿ ಅಲಂಕರಿಸಿದರು. ಸಂಭ್ರಮವೇ ಸಂಭ್ರಮ.

ದೃಢವರ್ಮನು ರತ್ನಾವತಿಯನ್ನು ವತ್ಸರಾಜನಿಗೆ ವಿವಾಹಮಾಡಿಕೊಟ್ಟನು. ರೂಪದಲ್ಲಿ ರತಿಯಂತಿದ್ದ ರತ್ನಾವತಿಗೆ ವತ್ಸರಾಜನು ಅನುರೂಪವರನಾಗಿದ್ದನು. ದೇವರ ದಯೆಯಿಂದ ಅವನು ತನ್ನ ದೇಶವನ್ನು ಯೋಗ್ಯ ರೀತಿಯಲ್ಲಿ ಪಾಲಿಸುತ್ತಾ ಬಂದು, ರತ್ನಾವತಿಯೊಂದಿಗೆ ಅನೇಕ ವರ್ಷಗಳ ತನಕ ಸುಖವಾಗಿ ಬಾಳಿದನು.

ಇದೇ ಲೇಖಕರ ಇತರ ಕೃತಿಗಳು.

೧. ಕ್ಷಾತ್ರದರ್ಶನ
(ಮಿಶ್ರಛಂದ ಕಾವ್ಯ)

೨. ಯೋಗಲಹರಿ
(ಮೂರು ಖಂಡಕಾವ್ಯಗಳು)

೩. ವಧೂ-ವಸಂತಸೇನೆ
(ಸಂ. ನಾಟಿಕ ಕಥಾವಸ್ತು)

೪. ನಾಗವರ್ಮನ ಕಾದಂಬರಿ
(ಕಾವ್ಯವಸ್ತು ಕಥೆ)

೫. ಶಿವಲೀಲೆ
(ಮಿಶ್ರಛಂದ ಕಾವ್ಯ)

೬. ಸಂಗ್ರಾಮ ಸಿಂಹ
(ಐತಿಹಾಸಿಕ ಕಥನ)

೭. ಸರಸ-ವಿರಸ
(ವಿನೋದ ಚಿತ್ರಗಳು)

೮. ಒಡ್ಡಿದ ಉರುಳು
(ಸಾಮಾಜಿಕ ಕಾದಂಬರಿ)

೯. ತಪ್ಪಿದ ಕೊರಳು (ಅಚ್ಚಿನಲ್ಲಿದೆ)
(ಸಾಮಾಜಿಕ ಕಾದಂಬರಿ)